40th Year of Publication. Phone: 3728.

ವಾರ್ಷಿಕ ಚಂದಾ

ರೂ. 12—50.

ಪ್ರಭಾತ

ಬೆಲೆ
20
ಪೈಸೆ.

ಸಂಪುಟ: ೪೦. ಸಂಚಿಕೆ: ೩೨. | ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 15—9—1974 | VOL. 40. No. 32.

ನೆರೆಸಂತ್ರಸ್ತರ ಪುನರ್ನಿವೇಶನಕ್ಕೆ ಸಾಲ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಅಭೂತಪೂರ್ವ ನೆರೆಹಾವಳಿಯಿಂದಾಗಿ ಸಂಕಷ್ಟಕ್ಕೀಡಾದ ನೆರೆಸಂತ್ರಸ್ತರ ಪುನರ್ನಿವೇಶನಕ್ಕಾಗಿ ಜೀವವಿಮಾ ಕಾರ್ಪೊರೇಶನಿನಿಂದ ಒಂದೂವರೆ ಕೋಟಿ ರೂಪಾಯಿ ಸಾಲ ಮಂಜೂರಾಗಿದ್ದು, ಸಾಲದ ಹಣ ದೊರೆತೊಡನೆ ಸಂತ್ರಸ್ತರಿಗೆ ವಸತಿನಿರ್ಮಾಣ ಮತ್ತು ಭಾಗಶಃ ಹಾನಿಗೊಂಡ ಮನೆಮಾರುಗಳ ದುರಸ್ತಿ ಕಾರ್ಯ ಆರಂಭಿಸಿ ಮೂರು ನಾಲ್ಕು ತಿಂಗಳೊಳಗೆ ಅದನ್ನು ಕಾರ್ಯಗತಗೊಳಿಸಲಾಗುವುದೆಂದು ರಾಜ್ಯದ ವಸತಿ ಮತ್ತು ಯೋಜನಾ ಅಭಿವೃದ್ಧಿ ಖಾತೆಯ ಕಾರ್ಯದರ್ಶಿ ಶ್ರೀ| ಎಸ್. ವೆಂಕಟೇಶ್ ಅವರು ಪತ್ರಿಕಾಪ್ರತಿನಿಧಿಗಳಿಗಿತ್ತ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಜೀವವಿಮಾ ಕಾರ್ಪೊರೇಶನಿನಿಂದ ಮಂಜೂರಾಗಿರುವ ಸಾಲ ಕೇಂದ್ರದ ಘನ ಉದ್ದಿಮೆಗಳ ಸಚಿವ ಶ್ರೀ| ಟಿ. ಎ. ಪೈಯವರ ಪ್ರಯತ್ನದ ಫಲವಾಗಿದೆಯೆಂದೂ ಅವರು ತಿಳಿಸಿರುವರು.

ನೆರೆಪರಿಹಾರ ನಿಧಿಗೆ ಸಹಾಯ

ಮುಂಬಾಯಿಯ ಪ್ರೀಮಿಯರ್ ಒಟೊಮೊಬೈಲ್ ಕಂಪೆನಿ ಲಿಮಿಟೆಡ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ನೆರೆಪರಿಹಾರ ನಿಧಿಗೆ ರೂ. 20,000ದ ಚೆಕ್ಕನ್ನು ಉದಾರ ದಾನವಾಗಿ ಕಳಿಸಿರುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಸನ್ಮಾನಸಮಾರಂಭ

ಭಾರತೀಯ ವಿದ್ಯಾಭವನ, ಮಂಗಳೂರು ಕೇಂದ್ರದ ಆಶ್ರಯದಲ್ಲಿ ತಾ. 14ರಂದು ಸಾಯಂಕಾಲ ಮಂಗಳೂರು ಪುರಭವನದಲ್ಲಿ ಕೇಂದ್ರದ ಅಧ್ಯಕ್ಷ ಶ್ರೀ| ಮಧುಸೂದನ ಡಿ. ಕುಶೆ ಅವರ ಸಮ್ಮುಖದಲ್ಲಿ ಯಕ್ಷಗಾನ ರಸಋಷಿ ದೇರಾಜೆ ಸೀತಾರಾಮಯ್ಯನವರನ್ನು ಸನ್ಮಾನಿಸುವ ಸಮಾರಂಭ ನಡೆಯಿತು. ಸರ್ವಶ್ರೀ ಶೇಣಿ ಗೋಪಾಲಕೃಷ್ಣ ಭಟ್, ಪೆರ್ಲ ಕೃಷ್ಣಭಟ್ ಮತ್ತು ಪ್ರಭಾಕರ ಜೋಶಿಯವರು ಅಭಿನಂದನಾ ಭಾಷಣಮಾಡಿದರು. ಅಂದು ರಾತ್ರಿ ಅದೇ ಸ್ಥಳದಲ್ಲಿ ಕೇಂದ್ರದ ಕಟ್ಟಡ ನಿಧಿಯ ಸಹಾಯಾರ್ಥ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ "ಪಾದುಕಾಪಟ್ಟಾಭಿಷೇಕ, ವಾಲಿವಧೆ ಮತ್ತು ರಾವಣ ವಧೆ" ತಾಳಮದ್ದಳೆ ಕಾರ್ಯಕ್ರಮವೂ ನಡೆದಿತ್ತು.

ಜಿಲ್ಲಾ ಮಟ್ಟದ ಸಮ್ಮೇಳನ

ತುಳುಕೂಟದ ಆಶ್ರಯದಲ್ಲಿ ಸಪ್ಟೆಂಬರ್ ತಾ. 29ರಂದು ಮಂಗಳೂರು ಪುರಭವನದಲ್ಲಿ ಜಿಲ್ಲಾ ಮಟ್ಟದ ಸರ್ವ ಯುವಜನ ಸಂಘಸಂಸ್ಥೆಗಳ ಸಮ್ಮೇಳನವೊಂದು ನಡೆಯಲಿದೆ. ಇದರ ಜೊತೆಯಲ್ಲೇ ಮಧ್ಯಾಹ್ನ ತುಳು ಭಾಷಾ ಸಮ್ಮೇಳನ ಮತ್ತು ಸಂಜೆ ತುಳುಕೂಟದ ನಾಲ್ಕನೇ ವಾರ್ಷಿಕೋತ್ಸವ ಜರಗಲಿದೆಯೆಂದು ತಿಳಿದುಬಂದಿದೆ.

ಕಾರ್ಕಳದಲ್ಲಿ ದ್ವಿತೀಯ ಗೊಮ್ಮಟ ನಿರ್ಮಾಣ ಕಾರ್ಯ

ಕಾರ್ಕಳ ಮಂಗಳಪಾದೆಯಲ್ಲಿ ರಾಷ್ಟ್ರಪ್ರಶಸ್ತಿವಿಜೇತ ಶಿಲ್ಪಿ ಶ್ರೀ| ರಂಜಾಳ ಗೋಪಾಲಶೆಣೈಯವರಿಂದ ನಿರ್ಮಾಣವಾಗುತ್ತಿರುವ 38 ಅಡಿ ಎತ್ತರದ ಎರಡನೇ ಗೊಮ್ಮಟದ ಕೆತ್ತನೆಯ ಕಾರ್ಯವು ಭರದಿಂದ ಸಾಗುತಿದ್ದು, ವಿಗ್ರಹದ ಹಿಂಭಾಗದ ಕಾರ್ಯ ಮುಕ್ತಾಯ ಹಂತದಲ್ಲಿದೆಯೆಂದೂ ಒಂದೆರಡು ವಾರಗಳಲ್ಲಿ ವಿಗ್ರಹವನ್ನು ಮಗ್ಗಲು ಬದಲಿಸುವರೆಂದೂ ತಿಳಿದುಬಂದಿದೆ. ವರ್ಷಾಂತ್ಯದೊಳಗೆ ವಿಗ್ರಹ ಕಾರ್ಯವು ಪೂರ್ತಿಯಾಗಿ 1975ರಲ್ಲಿ ಆಗ್ರಾ ಬಳಿಯ ಫಿರೋಜಾಬಾದದ ಜೈನ ನಗರಿಯಲ್ಲಿ ಅದನ್ನು ಪ್ರತಿಷ್ಠಿಸಲಾಗುವುದು. ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಬಾಹುಬಲಿ ವಿಗ್ರಹವನ್ನು ಯಶಸ್ವಿಯಾಗಿ ಸಾಗಿಸಿದ ಮಂಗಳೂರಿನ 'ರಾವತ್ ಬ್ರದರ್ಸ್' ಸಂಸ್ಥೆಯವರೇ ಈ ಎರಡನೆ ವಿಗ್ರಹವನ್ನೂ ಕಾರ್ಕಳದಿಂದ ಮಂಗಳೂರಿಗೆ ಟ್ರಾಲಿಯಲ್ಲಿ, ಆ ಮೇಲೆ ಇಲ್ಲಿಂದ ಫಿರೋಜಾಬಾದಕ್ಕೆ ರೈಲಿನಲ್ಲಿ ಸಾಗಿಸುವ ವ್ಯವಸ್ಥೆ ಮಾಡುವರೆನ್ನಲಾಗಿದೆ.

ಸರ್ವಜ್ಞ ಕವಿಯ ಶತಮಾನೋತ್ಸವ ಸಿದ್ಧತೆ

ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ಶಾಖೆಯ ಆಶ್ರಯದಲ್ಲಿ ಈ ವರ್ಷದ ರಾಜ್ಯೋತ್ಸವದ ವೇಳೆ ಸರ್ವಜ್ಞಕವಿಯ ನಾಲ್ಕನೇ ಶತಮಾನೋತ್ಸವ ನವೆಂಬರ್‌ನಲ್ಲಿ ಆಚರಿಸಲು ನಿರ್ಣಯಿಸಲಾಗಿದೆ. ಸರ್ವಜ್ಞವಚನ ಬಾಯಿಪಾಠ ಸ್ಪರ್ಧೆಯು ಉತ್ಸವದ ಮುಖ್ಯ ವೈಶಿಷ್ಟ್ಯ. ಇತ್ತೀಚೆಗೆ ಪ್ರಕಟಿಸಿದ ಸರ್ವಜ್ಞ ವಚನ ಪುಸ್ತಕದಿಂದ 50 ವಚನಗಳನ್ನು ಕಂಠಪಾಠಮಾಡುವುದೇ ಸ್ಪರ್ಧೆಗೆ ನಿಲ್ಲುವ ಅರ್ಹತೆಯಾಗಿದೆ. ಪುಸ್ತಕಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಂಗಳೂರು ಶಾಖೆಯ ಕಾರ್ಯದರ್ಶಿ ಶ್ರೀ| ಪಿ. ಕೆ. ನಾರಾಯಣರಿಂದ ಪಡೆಯಬಹುದಾಗಿದೆ.

ಶ್ರೀಗಂಧದ ಅಕ್ರಮ ಸಾಗಾಟ

110 ಗಂಧದ ದೊಡ್ಡ ತುಂಡುಗಳು, 50 ಸಣ್ಣ ತುಂಡುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಕಾರೊಂದನ್ನು ಗುಮಾನಿನ ಮೇಲೆ ವೇಣೂರು ಪೋಲೀಸ್ ಸ್ಟೇಶನ್ ಸರಹದ್ದಿನಲ್ಲಿ ಇತ್ತೀಚೆಗೆ ವಶಪಡಿಸಿ ಈ ಸಂಬಂಧ ಓರ್ವನನ್ನು ಬಂಧಿಸಿದ ಪ್ರಕರಣ ವರದಿಯಾಗಿದೆ.

ಕರ್ನಾಟಕದ ಹೊಸ ಭೂ ಸುಧಾರಣೆ ಕಾಯಿದೆ

ಗಮನಿಸಬೇಕಾದ ಅಂಶಗಳು

(ಲೇಖಕರು:—ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮುಖ್ಯಾಧಿಕಾರಿಗಳು)

ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ಕಾಯಿದೆಯನ್ನು ತತ್ಸಂಬಂಧ ರಚಿಸಲ್ಪಟ್ಟ ನಿಯಮಗಳೊಂದಿಗೆ ಜಾರಿಯಲ್ಲಿ ತರಲಾಗಿದೆ.

ಈ ಹೊಸ ಕಾಯಿದೆ ಗೇಣಿದಾರನಿಗೆ ಭೂ ಒಡೆತನದ ಹಕ್ಕನ್ನು ಸಲ್ಲಿಸುವುದು. ಭೂಪರಿಮಿತಿಯನ್ನು ನಿಗದಿಪಡಿಸಿ ಕೃಷಿಕರಲ್ಲದವರು ಭೂಮಿ ಹೊಂದುವ ಬಗ್ಗೆ ನಿರ್ಬಂಧ ವಿಧಿಸುತ್ತದೆ. ಇದರಿಂದಾಗಿ ಭೂಸುಧಾರಣೆ ವಿಷಯದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುವುವು.

ಪ್ರತಿಯೊಬ್ಬ ಗೇಣಿದಾರ, ಭೂಒಡೆಯ ಅಥವಾ ಭೂಮಿ ಹೊಂದುವ ಆಸಕ್ತಿಯುಳ್ಳವರು ಈ ಹೊಸ ಕಾಯಿದೆಯಿಂದ ತಮಗಾಗುವ ಪರಿಣಾಮದ ಬಗ್ಗೆ ಮತ್ತು ತಮ್ಮ ಹಕ್ಕು ಹಾಗೂ ಕರ್ತವ್ಯದ ಬಗ್ಗೆ ತಿಳುವಳಿಕೆ ಹೊಂದುವುದು ಅವಶ್ಯ. ಅದಕ್ಕಾಗಿ ಅವರಿಗೆ ಬೇಕಾದ ಮಾಹಿತಿಯನ್ನು ಸಂಕ್ಷೇಪವಾಗಿ ಇಲ್ಲಿ ಒದಗಿಸಲಾಗಿದೆ.

ಈ ಹೊಸ ಕಾಯಿದೆಯಿಂದಾಗಿ ಸುಮಾರು ಐದು ಲಕ್ಷ ಗೇಣಿದಾರರು ಭೂಒಡೆಯರಾಗಲಿದ್ದಾರೆ.

ಗೇಣಿದಾರರು ಗಮನಿಸಬೇಕಾದ ಅಂಶಗಳು:

1) ಗೇಣಿಗಾಗಿ ನೀಡಲಾಗಿರುವ ಭೂಮಿ ದಿನಾಂಕ 1–3–1974ರಿಂದ ಎಲ್ಲ ರೀತಿಯ ಸಾಲ–ಶೂಲಗಳಿಂದ ಮುಕ್ತವಾಗಿ ಪೂರ್ಣ ರಾಜ್ಯ ಸರ್ಕಾರದ ಸ್ವತ್ತಾಗುವುದು.

2) ಇನ್ನು ಮುಂದೆ ಸೈನಿಕರು ಮತ್ತು ನಾವಿಕರನ್ನು ಹೊರತುಪಡಿಸಿ ಯಾರೂ ಭೂಮಿಯನ್ನು ಗೇಣಿಗೆ ನೀಡಲಾಗದು.

3) ಅಂದಿನಿಂದ ನ್ಯಾಯಮಂಡಳಿಗಳು ಗೇಣಿದಾರರನ್ನು ಹಕ್ಕುದಾರರನ್ನಾಗಿ ಘೋಷಿಸುವ ವರೆಗೂ, ವಾರ್ಷಿಕ ಗೇಣಿಯ ಹಣವನ್ನು (ಭೂ ಕಂದಾಯದ ಹಾಗೂ ನೀರಿನ ತೆರಿಗೆಯ ಹತ್ತು ಪಟ್ಟು ಅಥವಾ ಗುತ್ತಿಗೆ ಗೇಣಿ–ಇದರಲ್ಲಿ ಯಾವುದ ಕಡಿಮೆಯೋ ಅಷ್ಟು) ಗೇಣಿದಾರನು ರಾಜ್ಯ ಸರ್ಕಾರಕ್ಕೆ ನೀಡಬೇಕು, ಭೂಮಾಲಿಕರಿಗೆ ನೀಡಬಾರದು.

4) ಗೇಣಿದಾರ ತನ್ನಷ್ಟಕ್ಕೆ ತಾನೇ 1–3–1974ರಿಂದ ಭೂಮಾಲಿಕನಾಗಲಾರ. ಭೂಮಿಯ ಒಡೆತನ ಪಡೆಯಲು ಗೇಣಿದಾರ 31–12–1974ರೊಳಗಾಗಿ ಫಾರ್ಮ್ ನಂ. 7ರಲ್ಲಿ ತಾಲೂಕಾ ನ್ಯಾಯಮಂಡಳಿಗಳಿಗೆ ಅರ್ಜಿಯನ್ನು ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯೊಳಗಾಗಿ ಅರ್ಜಿ ಸಲ್ಲಿಸಲು ತಪ್ಪಿದರೆ ಆತ ತನ್ನ ಒಡೆತನದ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಇದರ ಬಗ್ಗೆ ತಾಲೂಕಾ ನ್ಯಾಯಮಂಡಳಿಗಳ ನಿರ್ಧಾರವೇ ಅಂತಿಮ.

5) ಭೂಕಂದಾಯ, ನೀರಿನ ತೆರಿಗೆ, ಸುಧಾರಣಾ ಶುಲ್ಕ ಹಾಗೂ ಅವುಗಳ ಮೇಲೆ ವಿಧಿಸಲಾದ ಇತರ ಕರಗಳನ್ನು ಗೇಣಿದಾರರೇ ಸರ್ಕಾರಕ್ಕೆ ಅಥವಾ ಸ್ಥಾನಿಕ ಅಧಿಕಾರಿಗಳಿಗೆ ಕೊಡಬೇಕು.

6) ಗೇಣಿದಾರ ತನ್ನ ವಶದಲ್ಲಿದ್ದ ಭೂಮಿಯನ್ನು ಇನ್ನೊಬ್ಬನಿಗೆ ಗೇಣಿಗೆ ಕೊಡುವುದಾಗಲಿ ಅಥವಾ ಭಾಗಮಾಡುವುದನ್ನಾಗಲಿ ಮಾಡಬಾರದು.

7) ಒಬ್ಬನಿಂದ ಅಥವಾ ಹಲವಾರು ಜನರಿಂದ ಗೇಣಿಗಾಗಿ ಹೊಂದಿದ ಭೂಮಿಗಳಲ್ಲಿ, ಗೇಣಿದಾರ ತನಗೆ ಇಷ್ಟವಾದ ಭೂಮಿಯನ್ನೇ ಬೇಡಬಹುದು.

8) ಗೇಣಿದಾರ 'ಎ', 'ಬಿ' ಮತ್ತು 'ಸಿ' ಶ್ರೇಣಿಯ ಭೂಮಿಗೆ ನಿವ್ವಳ ವಾರ್ಷಿಕ ಆದಾಯದ 15 ಪಟ್ಟು, 'ಡಿ' ಶ್ರೇಣಿ ಭೂಮಿಗೆ 20 ಪಟ್ಟು ಹಣವನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ.

9) ಸರ್ಕಾರ ನಿಗದಿಪಡಿಸಿದ ಭೂಮಿಯ ಬೆಲೆಯನ್ನು ಗೇಣಿದಾರ ಸಂಪೂರ್ಣವಾಗಿ ಒಂದೇಬಾರಿಗೆ ಅಥವಾ ಇಪ್ಪತ್ತು ಸಮಾನ ವಾರ್ಷಿಕ ಕಂತುಗಳಲ್ಲಿ ಶೇಕಡಾ 4ಕ್ಕರ ಒಡ್ಡಿಯಂತೆ ಪಾವತಿಮಾಡಬಹುದು. ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು. ಭೂಮಾಲಿಕನಿಗಲ್ಲ.

10) ಸಂಪೂರ್ಣ ಹಣ ಸರ್ಕಾರಕ್ಕೆ ಸಂದಾಯವಾದ ನಂತರವೇ ತಹಸಿಲ್ದಾರರು ಗೇಣಿದಾರನಿಗೆ ಸ್ವಾಧೀನತ್ವದ ಹಕ್ಕಿನ ಪತ್ರ ನೀಡುವರು. ಅಂದಿನಿಂದ ಮಾತ್ರ ಆತ ಭೂಮಿಯೊಡೆಯ.

11) 1–3–1974ರ ನಂತರ ಗೇಣಿದಾರ ತಾನು ಸಾಗುವಮಾಡುವ ಭೂಮಿಯನ್ನು (ಗೇಣಿಗೆ ನೀಡಲಾದ ಭೂಮಿಯನ್ನು) ಆದರ ಮಾಲಿಕರಿಂದ ನೇರವಾಗಿ ಕೊಂಡುಕೊಳ್ಳಬಾರದು. ಅಂತಹ ವ್ಯವಹಾರ ಆತನಿಗೆ ಭೂಮಿ ಒಡೆತನದ ಹಕ್ಕನ್ನು ನೀಡುವುದಿಲ್ಲ. ಇದರಿಂದ ಗೇಣಿದಾರನಿಗೆ ನಷ್ಟ ಸಂಭವಿಸುವುದು.

12) ಭೂಸ್ವಾಧೀನತ್ವದ ಹಕ್ಕನ್ನು ಪಡೆದ ಗೇಣಿದಾರ ಸತತವಾಗಿ ಮೂರು ವರ್ಷಗಳ ಕಾಲ, ಸಮರ್ಪಕವಾದ ಕಾರಣಗಳಿಲ್ಲದೆ, ಸ್ವಂತ ಬೇಸಾಯಮಾಡಲು ತಪ್ಪಿದಲ್ಲಿ ಭೂಮಿ ಮೇಲಿನ ಆತನ ಹಕ್ಕನ್ನು ಸರ್ಕಾರ ರದ್ದುಗೊಳಿಸಿ ಸ್ವಾಧೀನಪಡಿಸಿಕೊಳ್ಳುತ್ತದೆ.

13) ಗೇಣಿದಾರ ಭೂಮಾಲಿಕತ್ವ ಪಡೆದ ದಿನಾಂಕದಿಂದ ಆರು ವರ್ಷಗಳೊಳಗಾಗಿ ಭೂಮಿಯನ್ನು ಮಾರಾಟ, ದಾನ, ಬದಲಾಯಿಸಿಕೊಳ್ಳುವುದು, ಗೇಣಿಗೆ ನೀಡುವುದು ಮತ್ತು ಭೋಗ್ಯ (ಒತ್ತೆ) ಮುಂತಾದ ಯಾವ ರೀತಿಯಲ್ಲೂ ಪರಾಧಾರೆಮಾಡಕೂಡದು.

14) ಒಂದುವೇಳೆ ಗೇಣಿದಾರನಿಗೆ ಭೂಮಾಲಿಕತ್ವ ಪಡೆದ ಆರು ವರ್ಷಗಳೊಳಗಾಗಿ ಸ್ವಂತ ಬೇಸಾಯಮಾಡುವ ಇಚ್ಛೆ ಇಲ್ಲದಿದ್ದಲ್ಲಿ ಆ ಭೂಮಿಯನ್ನು ಪುನಃ ಸರ್ಕಾರಕ್ಕೆ ನೀಡಬೇಕಾಗುವುದು. ಸರ್ಕಾರ ಆತ ನೀಡಿದ ಭೂಮಿ ಬೆಲೆಯೊಂದಿಗೆ ಭೂಮಿ ಅಭಿವೃದ್ಧಿಪಡಿಸಲು ಅವನು ವೆಚ್ಚಮಾಡಿದ ಹಣದ ಒಂದು ಭಾಗವನ್ನು ಸೇರಿಸಿ ತಿರುಗಿ ಕೊಡುವದು.

(ಸಶೇಷ)

ಹಳ್ಳಿಯನ್ನು ರಕ್ಷಿಸಿ, ಹುಲಿಯನ್ನೂ ಉಳಿಸಿದ ಬೇಟೆಗಾರ—ವಿದ್ವಾಂಸ

ಕಲ್ಕತ್ತೆಯ ಸಮೀಪದ ಜೌಗು ಪ್ರದೇಶ ಸುಂದರ್‌ಬನ್ಸ್‌ನ ಬೆಸ್ತರ ಸಮುದಾಯವನ್ನು ಸುಮಾರು ಒಂದು ತಿಂಗಳಿಂದ ಒಂದು ಹುಲಿ ಕಾಡುತಿತ್ತು. ಮೊಂಟಾನಾಗ್ ಸೇರಿದ 30 ವರ್ಷ ವಯಸ್ಸಿನ ಅಮೆರಿಕನ್ ಪ್ರಾಣಿಶಾಸ್ತ್ರಜ್ಞರೊಬ್ಬರು ಈ ಪ್ರದೇಶವನ್ನು ಹುಲಿಯ ಕಾಟದಿಂದ ಮುಕ್ತಗೊಳಿಸಿದರು.

ಮಾಂಸಭಕ್ಷಕ ವನ್ಯಜೀವಿಗಳ ಪರಿಸರಶಾಸ್ತ್ರಜ್ಞರಾದ, ನೀಳಕೇಶದ ಡಾ। ಜಾನ್ ಎಸ್. ಸೀಡೆನ್‌ಸ್ಟಿಕರ್ ಅವರು ಜರ್ಖಾಲಿ ಗ್ರಾಮದ ಹಳ್ಳಿಗರನ್ನು ಹುಲಿಯ ಭೀತಿಯಿಂದ ರಕ್ಷಿಸಿದುದಷ್ಟೇ ಅಲ್ಲದೆ ಭಾರತದ ಪ್ರಾಣಿಧಾಮಕ್ಕಾಗಿ ಹುಲಿಯನ್ನೂ ರಕ್ಷಿಸಿದರು.

ವಿದ್ವಾಂಸ–ಬೇಟೆಗಾರ ಸೀಡೆನ್‌ಸಿಕರ್ ಅವರು ಆಗಸ್ಟ್ 26ರಂದು ಮಂಗಳವಾರ ಬೆಳಗಿನ ಜಾವದಲ್ಲಿ ಒಂದು ಮೂರ್ಛೆಗೊಳಿಸುವ ಬಂದೂಕದಿಂದ ಗುರಿಯಿಟ್ಟು ಹೊಡೆದರು. ಅದಕ್ಕೆ ಮುನ್ನ ಅವರು ಮೃಗದ ವರ್ತನೆಗಳನ್ನು ವೀಕ್ಷಿಸಲು ಹತ್ತುದಿನಗಳ ಕಾಲ ತಾಳ್ಮೆಯಿಂದ ಕಾದಿದ್ದರು. ಹಳ್ಳಿಗರು ಈ ಹುಲಿಯನ್ನು ಹೆಣ್ಣು ಎಂದು ಭಾವಿಸಿ "ಸುಂದರಿ" ಎಂದು ನಾಮಕರಣಮಾಡಿದ್ದರು. ಆದರೆ ಶಿಕಾರಿ ನಂತರ ಅದು ಹೆಣ್ಣಲ್ಲ, ಗಂಡು, 26 ತಿಂಗಳ ಮರಿ, ಅದು ಇನ್ನೂ ಆಟವಾಡುವ ವಯಸ್ಸಿನದು ಎಂದು ಸೀಡೆನ್‌ಸ್ಟಿಕರ್ ಪತ್ತೆಹಚ್ಚಿದರು.

"ಹುಲಿಯೊಂದನ್ನು ನಿಶ್ಚಲನಗೊಳಿಸುವ ಗುಂಡಿನಿಂದ ವಶಪಡಿಸಿಕೊಂಡು ಪ್ರಾಣಿಧಾಮಕ್ಕೆ ಸಾಗಿಸಿರುವುದು ಇದೇ ಪ್ರಥಮ" ಎಂದು ಈ ಅಮೆರಿಕನ್ ವನ್ಯಜೀವಿ ತಜ್ಞರು ಹೇಳುತ್ತಾರೆ. ಇಡಾಹೋ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದು ಅಲ್ಲಿಯೇ ಬೋಧಿಸುತ್ತಿರುವ ಡಾ। ಸೀಡೆನ್‌ಸ್ಟಿಕರ್ 250ಕ್ಕೂ ಹೆಚ್ಚು ಹುಲಿಗಳು, ಚಿರತೆಗಳು ಹಾಗೂ ಇತರ ಬೆಕ್ಕುಗಳನ್ನು ನಿಶ್ಚಲನಗೊಳಿಸಿದ್ದಾರೆ.

ಡಾ। ಸೀಡೆನ್‌ಸ್ಟಿಕರ್ ಅವರು ಐದು ದಿನಗಳ ಮುಂಚೆಯೇ ಹುಲಿಯನ್ನು ಹೊಡೆಯಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಏಕೆಂದರೆ ಹುಲಿ ಒಂದು ಕೊಳದ ಬಳಿ ಇತ್ತು. ಅದು ನೀರಿನಲ್ಲಿ ಬಿದ್ದು ಮುಳುಗಿಹೋಗುವ ಸಂಭವ

(5ನೇ ಪುಟಕ್ಕೆ ಮುಂದುವರಿದಿದೆ)

ಸಿಮೆಂಟ್ ಉಳಿಸುವುದು ಹೇಗೆ?

ವಿಶೇಷವಾಗಿ ತಯಾರಿಸಲಾದ ಸುರಖಿ ಅಥವಾ ಕೈಗಾರಿಕೆಗಳಲ್ಲಿ ದೊರೆಯುವ ಬೂದಿಯಲ್ಲಿ ಸುಣ್ಣವನ್ನು ಸೇರಿಸಿದರೆ ಗಾರೆ ಹಾಗೂ ಪ್ಲಾಸ್ಟರ್‌ಗಳಲ್ಲಿ ಸಿಮೆಂಟ್ ಬಳಸುವುದನ್ನು ಸಂಪೂರ್ಣವಾಗಿ ನಿಲ್ಲಿಸಬಹುದು.

ದೇಶದ ನಾನಾ ಕಡೆಗಳಲ್ಲಿರುವ ಕೈಗಾರಿಕೆಗಳಲ್ಲಿ ಪ್ರತಿವರ್ಷ ಸುಮಾರು 50 ಲಕ್ಷ ಟನ್ನಿಗೂ ಹೆಚ್ಚು ಇಂಥ ಬೂದಿ ಸಿಗುತ್ತದೆ.

ಕೂಡಲೇ ಬಳಸಬಹುದಾದಂತಹ ಜಲಾಂಶವುಳ್ಳ ಒಣಗಿದ ಸುಣ್ಣವು ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದೆ.

ಇಟ್ಟಿಗೆ ತಯಾರಿಸುವ ಕಡೆಗಳಲ್ಲೂ ವಿಶೇಷ ನಮೂನೆಯ ಸುರಖಿಯನ್ನು ಪಡೆಯಬಹುದಾಗಿದೆ.

ಈ ಹೊಸಬಗೆಯ ವಿಧಾನ ಅನುಸರಿಸುವುದರಿಂದ ಸುಮಾರು ಸೇಕಡಾ 20ರಷ್ಟು ಸಿಮೆಂಟ್ ಉಳಿಸಬಹುದಾಗಿದೆ.

ಕಳ್ಳಸಾಗಾಣಿಕೆಯ ಅರಸು ಬಖಿಯಾ ಬಂಧನ

ಚಿನ್ನ, ಬೆಳ್ಳಿ, ವಿವಿಧ ವಿದೇಶೀ ವಿಲಾಸೀ ವಸ್ತುಗಳ ಕಳ್ಳಸಾಗಾಣಿಕೆಯ ವಹಿವಾಟುಗಳನ್ನು ನಡೆಸುತ್ತಿರುವವರಲ್ಲಿ 'ಅರಸು' ಎನಿಸಲ್ಪಟ್ಟ ಗುಜರಾಥದ ಸುಕೂರ್ ನಾರಣ್ ಬಖಿಯಾನನ್ನು, ಕಳ್ಳಸಾಗಾಣಿಕೆಯ ಮೇಲೆ ರಾಷ್ಟ್ರವ್ಯಾಪೀ ಕ್ರಮ ತೆಗೆದುಕೊಂಡ ಮಹಾ ಅಭಿಯೋಗ ಪ್ರಕರಣದಲ್ಲಿ ಸೆರೆಹಿಡಿಯಲಾಗಿದೆ. ಹೃದ್ರೋಗ ಸಂಬಂಧವಾಗಿ ಚಿಕಿತ್ಸೆಪಡೆಯುತಿದ್ದ ನೆನ್ನಲಾದ ಬಖಿಯಾನನ್ನು ಮುಂಬಯಿಯ ಒಂದು ಆಸ್ಪತ್ರೆಯಲ್ಲಿ ಶುಶ್ರೂಷೆಗೆ ಸೇರಿಸಿದ್ದು, ಬಲವಾದ ಕಾವಲು ಇರಿಸಲಾಗಿದೆ. 'ಜಾಮೀನು ರಹಿತ'ವಾದ ಈ ಬಂಧನದಲ್ಲಿ—ಕಾವಲುಗಾರರ ನಡುವೆ—ಬಖಿಯಾನ ಸ್ವಾಸ್ಥ್ಯ ತೀರ ಕೆಡುವುದಾಗಿ ಹೇಳಿ, ಜಾಮೀನಿನ ಮೇಲೆ ಅವನನ್ನು ಬಿಡುಗಡೆಗೊಳಿಸಲು ಅವನ ವಕೀಲರು ಯತ್ನಿಸುತಿದ್ದಾರೆ.

450 ಬಗೆಯ ಗುಲಾಬಿ ಹೂಗಳು

- ಮಾವಿನ ದೊಡ್ಡ ಕೊಂಬೆಯಲ್ಲಿ ಇತರ 14 ಬಗೆಯ ಮಾವಿನ ಹಣ್ಣುಗಳ ಕಸಿ.
- ನೆಲ್ಲಿಕಾಯಿ ಕಸಿ.

ಕರ್ನಾಟಕದಲ್ಲಿ 450 ಬಗೆಯ ಗುಲಾಬಿ ಹೂಗಳು! ಆಶ್ಚರ್ಯ, ಆದರೆ ನಿಜ.

ಬೆಳಗಾಂ ಜಿಲ್ಲೆಯ ಖಾನಾಪುರ ತಾಲೂಕಿನ ಅಸೋಗಾ ಗ್ರಾಮದ ಕೃಷಿ ಪದವೀಧರ ಹಾಗೂ ಪ್ರಗತಿಶೀಲ ತೋಟಗಾರ ಶ್ರೀ। ಪ್ರಭಾಕರ ಗಣೇಶ್ ಮನೇರಿಕರ್ ತಮ್ಮ 40 ಎಕರೆ ಪ್ರದೇಶದ ತೋಟದಲ್ಲಿ 'ಸ್ವರ್ಗ ಸದೃಶವಾದ' ಗುಲಾಬಿ ತೋಟವನ್ನು ಬೆಳೆಸಿದ್ದಾರೆ. ಜನಪ್ರಿಯ ಬಗೆಗಳಲ್ಲದೆ ಸ್ಕಾರ್ಲೆಟ್ ನೈಟ್, ಪೀಟರ್ ಫ್ರಾಂಕ್‌ಸ್ ಫೀಲ್ಡ್, ರೆಡ್ ಚೀಫ್, ರೆಡ್ ಡೆವಿಲ್, ಮರಿಯಾ ಕಾಲ ಇತ್ಯಾದಿ ಸುಮಾರು 460 ಬಗೆಯ ಗುಲಾಬಿಗಳು ಈ ತೋಟದಲ್ಲಿದ್ದು ಜೊತೆಗೆ 40ರಿಂದ 45 ಬಗೆಯ ಸಣ್ಣ ಗುಲಾಬಿ ಹೂಗಳು, ಫ್ಲೋರಿಬಂಡಾ, ಬಳ್ಳಿ ಹೂಗಳು ಇಲ್ಲಿವೆ.

ಪ್ರಭಾಕರರ ತೋಟ ವಿವಿಧ ಜಾತಿಯ ಮಾವಿನಹಣ್ಣುಗಳ ಪ್ರದರ್ಶನವಿದ್ದಂತೆ, ರತ್ನಗಿರಿ, ಅಲ್ಫಾನ್ಸೋ, ಗೋವಾ ಮನಕುರದ್, ಲಕ್ನೋದ ದಾಸೇರಿ, ಬನಾರಸ್‌ನ ಲಂಗದಾ ಮತ್ತು ರಾಷ್ಟ್ರದ ವಿವಿಧ ಭಾಗಗಳ ಸುಮಾರು 60 ಜಾತಿಯ ಮಾವಿನ ಹಣ್ಣುಗಳನ್ನು ಇಲ್ಲಿ ಬೆಳೆಯಲಾಗಿದೆ. ಸುಮಾರು 14 ಪೌಂಡು ತೂಕದ ಚಕೋತನೆ ಹಣ್ಣು ಸೇರಿದಂತೆ ವಿವಿಧ ಬಗೆಯ ಕಿತ್ತಳೆ, ಮೂಸಂಬಿ, ಪೇರಳೆ, ನಿಂಬೆ ಹಣ್ಣುಗಳು ಇಲ್ಲಿ ಹೇರಳವಾಗಿದೆ. ಸೇಬು, ಇಟಲಿಯ ನಿಂಬೆ, ಖರ್ಜೂರ, ನೇರಳೆ, ಏಲಕ್ಕಿ ಇತ್ಯಾದಿಗಳು ಈ ತೋಟದಲ್ಲಿವೆ.

ಪ್ರಭಾಕರರ ಮತ್ತು ಅವರ ತಂದೆಯವರ ಬಹುದಿನಗಳ ದುಡಿಮೆಯ ಪ್ರತಿಫಲ ಈ ಮಹತ್ವದ ಸಾಧನೆ. ಅಸೋಗ ಗ್ರಾಮ ಕಲ್ಲಿನಿಂದ ಕೂಡಿದ ಭೂಮಿ. 1940ರ ಸುಮಾರಿನಲ್ಲಿ ಪ್ರಭಾಕರರ ತಂದೆ ಮಣ್ಣನ್ನು ಪರೀಕ್ಷೆಗಾಗಿ ಪೂನದ ಕೃಷಿ ವಿದ್ಯಾನಿಲಯಕ್ಕೆ ಕಳುಹಿಸಿದ್ದರು. ಪೂರ್ಣ ಪರೀಕ್ಷೆಯ ನಂತರ ಭೂಮಿ ಕೃಷಿಗೆ ಅನರ್ಹವೆಂದೂ ಹತ್ತುವರ್ಷಗಳ ಕಾಲ ಯಾವುದೇ ಬೆಳೆಯನ್ನು ತೆಗೆಯದಿರುವಂತೆ ವಿಶ್ವವಿದ್ಯಾನಿಲಯದವರು ತಿಳಿಸಿದರು. ಆದರೆ ಅವರು ನಿರಾಶರಾಗಲಿಲ್ಲ. ತೋಟದ ಬೆಳೆ ತೆಗೆಯಲು ನಿರ್ಧರಿಸಿದರು. ತಮ್ಮ ನಿರ್ಧಾರ-ಶ್ರಮಗಳಿಗೂ ಅಡಚಣೆ ಎಂಬಂತೆ 1953ರ ಜುಲೈನಲ್ಲಿ ಅಸೋಗಾದಲ್ಲಿ ಪ್ರವಾಹ ಸಂಭವಿಸಿತು. ಇಟ್ಟ ಬೆಳೆಯೆಲ್ಲ ನಾಶ. ನಷ್ಟ ಸುಮಾರು ಒಂದು ಲಕ್ಷ. ಬರಿಗೈಯಾದ ಪ್ರಭಾಕರರ ತಂದೆ ಧೃತಿಗೆಡಲಿಲ್ಲ. ದಿನಕ್ಕೆ ಸುಮಾರು 18–20 ಗಂಟೆಗಳ ಕಾಲ ದುಡಿದರು. ಶ್ರಮ ಸಾರ್ಥಕ.

ಪ್ರಭಾಕರ್ ತಮ್ಮ ತೋಟದಲ್ಲಿ ಪ್ರಯೋಗಗಳನ್ನು ನಡೆಸುತ್ತಾರೆ. ಸ್ಥಳೀಯ ನೆಲ್ಲಿಕಾಯಿ ಗಿಡದಲ್ಲಿ ಬನಾರಸ್‌ನ ನೆಲ್ಲಿಕಾಯಿಯ ಕಸಿ, ದೊಡ್ಡ ಮಾವಿನ ಕೊಂಬೆಯಲ್ಲಿ ಸುಮಾರು 14 ಬಗೆಯ ಇತರ ಮಾವಿನ ಹಣ್ಣುಗಳ ಕಸಿ ಇತ್ಯಾದಿ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಮುಂಬೈ, ಪೂನಾ, ಗೋವಾ, ಬೆಂಗಳೂರುಗಳ ಮಾರುಕಟ್ಟೆಗಳಿಗೆ ಪ್ರಭಾಕರ್ ನಿರಂತರವಾಗಿ ಹೂಗಿಡಗಳು, ಕಸಿಮಾಡಿದ ಮಾವಿನ ಗಿಡಗಳನ್ನು ಪೂರೈಸುತ್ತಾರೆ. ಪ್ರತಿತಿಂಗಳು ಸರಾಸರಿ 2000 ಗುಲಾಬಿ ಗಿಡಗಳು ಮತ್ತು 2000 ಕಸಿಮಾಡಿದ ಗಿಡಗಳು ಅಸೋಗಾ ಗ್ರಾಮದಿಂದ ಬರುತ್ತವೆ.

——

ಮುಸ್ಲಿಂ ಪೂಜಾರಿಯು ಪೂಜಿಸುವ ಬಳ್ಳಾರಿಯ ಅಪೂರ್ವ ಮಾರುತಿ ದೇವಾಲಯ

ಬಳ್ಳಾರಿ ನಗರದ ಹೊರವಲಯದಲ್ಲಿ ಸಿರುಗುಪ್ಪಕ್ಕೆಹೋಗುವ ದಾರಿಯಲ್ಲಿ ಮಾರುತಿ ದೇವಾಲಯವೊಂದಿದೆ. ಅದು ಅನೇಕ ರೀತಿಯಲ್ಲಿ ಅಪೂರ್ವವಾದುದಾಗಿದೆ.

ಈ ಮಾರುತಿ ದೇವಾಲಯ ದೇಶದಲ್ಲಿರುವ ಇತರ ಹಿಂದೂ ದೇವಾಲಯಗಳಂತೆ ಹಿಂದೂ ಪೂಜಾರಿಯನ್ನು ಪಡೆದಿಲ್ಲ. ಇಲ್ಲಿನ ಪೂಜಾರಿ ಮುಸ್ಲಿಂ ಧರ್ಮಕ್ಕೆ ಸೇರಿದ ಪಿ. ಮೆಹಬೂಬ್ ಸಾಬ್!

ಈತ ಮಾರುತಿಯ ಪೂಜೆಯನ್ನು ಉರ್ದೂ ಮಂತ್ರ ಪಠಿಸುತ್ತ ಮಾಡುತ್ತಾರೆ. ಸಂಸ್ಕೃತ ಶ್ಲೋಕಗಳನ್ನು ಆತ ಪಠಿಸುವುದಿಲ್ಲ. ಈ ದೇವಾಲಯದಲ್ಲಿರುವ ವಿಗ್ರಹ ಮಾರುತಿಯದಾದರೂ ಪೂಜಾರಿ ಮೆಹಬೂಬ್ ಸಾಬ್ ಅದನ್ನು "ರಾಮ-ರಹೀಮ ಮಂದಿರ" ಎಂದು ಕರೆದಿದ್ದಾರೆ.

ಈ ದೇಗುಲಕ್ಕೆ ಹಿಂದೂ-ಮುಸ್ಲಿಂ ಭಕ್ತರು ಬರುತ್ತಾರೆ. ಇಲ್ಲಿನ ಪೂಜಾರಿ ಮೆಹಬೂಬ್ ಸಾಬ್ ಒರ್ವ ಮಂತ್ರವಾದಿ ಆತ ತಾಯಿತ ಮತ್ತು ರಕ್ಷಾ ಯಂತ್ರಗಳನ್ನು ಸಿದ್ಧಪಡಿಸಿ ಅವುಗಳನ್ನು ಹಿಂದೂ ಮತ್ತು ಮುಸ್ಲಿಂ ಭಕ್ತರ ರೋಗಪರಿಹಾರಕ್ಕಾಗಿ ಕೊಡುತ್ತಾನೆ. ಇದರಿಂದ ಅವನಿಗೆ ಒಳ್ಳೆಯ ಸಂಪಾದನೆಯಾಗುತ್ತಿದೆ. ಮೆಹಬೂಬ್ ತಾಯಿತಗಳ ಮೇಲೆ ಪರ್ಷಿಯನ್ ಮತ್ತು ಉರ್ದೂ ಭಾಷೆಯಲ್ಲಿ ಬರೆಯುತ್ತಾನೆ.

ಮಾರುತಿ ದೇವಾಲಯಕ್ಕೆ ಬರುವ ಮುಸ್ಲಿಂ ಭಕ್ತರಲ್ಲಿ ಧಾರ್ಮಿಕ ಸೌಹಾರ್ದತೆ ಮೂಡಿದೆಯೆಂದು ಮೆಹಬೂಬ್ ಸಾಬ್ ಹೇಳುತ್ತಾನೆ. ರಾಮ-ರಹೀಮ ಅಥವ ಕೃಷ್ಣ-ಕರೀಮ್ ನಡುವೆ ಏನೊಂದೂ ಭೇದವಿಲ್ಲವೆಂದು ಆತ ನುಡಿಯುತ್ತಾನೆ.

ಪ್ರತಿ ತಿಂಗಳೂ ಈ ದೇವಾಲಯದ ಪ್ರಾಂಗಣದಲ್ಲಿ ಕ್ಷೇತ್ರ ಪ್ರಚಾರ ಘಟಕವು ಚಲನಚಿತ್ರ ಪ್ರದರ್ಶನ ಏರ್ಪಡಿಸುತ್ತಿದೆ.

——

ವಿದ್ಯಾರ್ಥಿಗಳಿಗೆ ಉಚಿತ ದಂತಪರೀಕ್ಷೆ

ಈ ವರ್ಷ ಜಿಲ್ಲೆಯ ಎಲ್ಲಾ ಹೈಸ್ಕೂಲ್ ಮತ್ತು ಜೂನಿಯರ್ ಕೊಲೇಜುಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರ ದಂತಪರೀಕ್ಷೆಯನ್ನು ಉಚಿತವಾಗಿ ಕೈಗೊಳ್ಳುವ ಕಾರ್ಯಕ್ರಮವೊಂದನ್ನು ಇಂಡಿಯನ್ ಡೆಂಟಲ್ ಎಸೋಸಿಯೇಶನಿನ ದ. ಕ. ಜಿಲ್ಲಾ ಶಾಖೆ ರೂಪಿಸಿದೆ. ಈ ಕಾರ್ಯಕ್ರಮದಲ್ಲಿ ಮಂಗಳೂರು ರೋಟರಿ ಕ್ಲಬ್ಬು ಡೆಂಟಲ್ ಎಸೋಸಿಯೇಶನಿನೊಂದಿಗೆ ಸಹಕರಿಸುವುದು. ಈ ಕಾರ್ಯಕ್ರಮದ ಉದ್ಘಾಟನೆ ಇಂದು (ತಾ. 15) ಸಂಜೆ ಮಂಗಳೂರು ಸೈಂಟ್ ಎಗ್ನೇಸ್ ಕೊಲೇಜ್ ಹೈಸ್ಕೂಲಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಿಂದ ನಡೆಯಲಿದೆ.

ಶ್ರೀಕೃಷ್ಣ ಜಯಂತ್ಯುತ್ಸವಗಳು

ಶ್ರೀಕೃಷ್ಣ ಜನ್ಮಾಷ್ಟಮಿಯ ವಿವಿಧ ಕಾರ್ಯಕ್ರಮಗಳ ಅಂಗವಾಗಿ ಉಡುಪಿ ಶ್ರೀಕೃಷ್ಣ ಮಠದಲ್ಲಿ ಕೃಷ್ಣಾಷ್ಟಮಿಯಂದು ಪರ್ಯಾಯ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರ ನೇತೃತ್ವದಲ್ಲಿ 'ಶ್ರೀಕೃಷ್ಣ ರೂಪದರ್ಶನ' ಎಂಬ ಆಕರ್ಷಣೀಯ ಕಾರ್ಯಕ್ರಮ ನೆರವೇರಿತ್ತು. ಕೃಷ್ಣನ ಬಹುರೂಪಧರಿಸಿದ 15 ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ಮರುದಿನ ವಿಟ್ಲ ಪಿಂಡಿ ಮಹೋತ್ಸವವೂ ಅತ್ಯಂತ ವೈಭವದಿಂದ ಜರಗಿತ್ತು.

ಮಂಗಳೂರಲ್ಲಿ ಅತ್ತಾವರ, ಕದ್ರಿ ಮತ್ತು ಅಶೋಕನಗರಗಳಲ್ಲಿ ಶ್ರೀಕೃಷ್ಣ ಜಯಂತ್ಯುತ್ಸವಕ್ಕೆ ಸಂಬಂಧಿಸಿದ ಮೊಸರು ಕುಡಿಕೆ ಸಮಾರಂಭಗಳು ಸಡಗರದಿಂದ ನಡೆದಿದ್ದುವು.

——

"ಉನ್ನತ" ಜೀವನ

ಸ್ವಾಭಾವಿಕ ಸಹಜ ಸ್ಥಿತಿಗತಿಗಳಲ್ಲಿ ಆರೋಗ್ಯವಂತನು ಸಮುದ್ರಮಟ್ಟದಿಂದ 5000 ಮೀಟರುಗಳಷ್ಟು ಎತ್ತರದಲ್ಲಿ ಬಾಳಬಲ್ಲನೆಂದು ತಾಜಿಕ್ ವಿಜ್ಞಾನಿಗಳ ಅಕಾಡೆಮಿಯ ಸಂಶೋಧಕರು ಹೇಳುತ್ತಾರೆ. ಪಾಮಿರ್ ಪರ್ವತಾವಳಿಯ ಶೃಂಗಗಳಲ್ಲಿ ವೈದ್ಯಕೀಯ ಮತ್ತು ಜೀವವೈಜ್ಞಾನಿಕ ಪ್ರಯೋಗಗಳನ್ನು ನಡೆಸಿದ ಬಳಿಕ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ. ಸಮಾಜವಾದೀ ದೇಶಗಳು, ಸಂ. ರಾ. ಅಮೆರಿಕ, ಬ್ರಿಟನ್, ಜಪಾನ್ ಮತ್ತು ಪೇರು ದೇಶಗಳು ರೂಪಿಸಿದ ಒಂದು ಅಂತರರಾಷ್ಟ್ರೀಯ ಕಾರ್ಯಕ್ರಮದ ಪ್ರಕಾರ ಉನ್ನತ ಪರ್ವತನಿವಾಸಿಗಳನ್ನು ಪರೀಕ್ಷಿಸಲಾಯಿತು.

ಮನುಷ್ಯಶರೀರವು ಹೊಸ ಉನ್ನತ ಪರಿಸ್ಥಿತಿಗೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ತನಿಖೆಮಾಡಿ ಆಕ್ಸಿಜನ್ ಅಭಾವದ, ನೀಲಲೋಹಿತಾತೀತ ವಿಕಿರಣತೆ ಹೆಚ್ಚಳದ ಮತ್ತು ಉಷ್ಣಾಂಶ ಹಾಗೂ ಆರ್ದ್ರತೆಗಳಲ್ಲಿಯ ಹೊಯ್ದಾಟದ ದುಷ್ಪರಿಣಾಮಗಳನ್ನು ತಟಸ್ಥಗೊಳಿಸಲು ಅವರು ಶಿಫಾರಸುಗಳನ್ನೂ ಮಾಡಿದ್ದಾರೆ.

ಔನ್ನತ್ಯಗಳಲ್ಲಿ ಶಾರೀರಿಕ ಹೊಂದಾಣಿಕೆಯು ತುಂಬ ಯಾತನಾಮಯವೆಂಬುದು ಅವರಿಗೆ ಸ್ಪಷ್ಟಪಟ್ಟಿರುವ ಸಂಗತಿ. ಆದರೆ, ಬಾಹ್ಯಾಂತರಿಕ್ಷ ಅಥವಾ ಸಮುದ್ರದ ಆಳಗಳಲ್ಲಿ ದೀರ್ಘಕಾಲದ ವಾಸಕ್ಕೆ ತರಬೇತುಗೊಳಿಸಲು ಅಥವಾ ಕ್ರೀಡಾಸ್ಪರ್ಧೆಗಳಲ್ಲಿ ಭಾರೀ ಶಾರೀರಿಕ ಬಳಲಿಕೆಯನ್ನು ತಡೆದುಕೊಳ್ಳುವಂತೆ ತರಬೇತುಗೊಳಿಸಲೂ ಇದರಿಂದ ತುಂಬ ಸಹಾಯಕವಾಗುತ್ತದೆ.

ತಾಜಿಕ್ ವಿಜ್ಞಾನಿಗಳು ನಡೆಸಿರುವ ಈ ಸಂಶೋಧನೆಯಲ್ಲಿ ಅನೇಕ ದೇಶಗಳು ವಿಶೇಷ ಆಸಕ್ತಿಯನ್ನು ತೋರಿಸಿವೆ, ಯಾಕೆಂದರೆ ಜಗತ್ತಿನ ಅದ್ಯಂತ ಮಿಲಿಯ ಮಿಲಿಯ ಜನರು ಪರ್ವತಗಳಲ್ಲಿ ವಾಸಿಸುವವರಾಗಿದ್ದಾರೆ. ಭವಿಷ್ಯತ್ತಿನಲ್ಲಿ ಈ ಪ್ರದೇಶಗಳು ಆರ್ಥಿಕವಾಗಿ ಅಭಿವೃದ್ಧಿಗೊಂಡಾಗ ಇಲ್ಲಿಯ ಜನವಸತಿಯೂ ಹೆಚ್ಚಾಗುತ್ತದೆ.

ಬೆನ್ನೆಲುಬಿನ ತೊಂದರೆಗಳಿಗೆ ಪಪ್ಪಾಯಿ ಎಲೆಗಳಿಂದ ಪರಿಣಾಮಕಾರಿ ಚಿಕಿತ್ಸೆ

ರುಚಿಯಾದ ಹಣ್ಣುಗಳನ್ನು ನೀಡುವ ಪಪ್ಪಾಯಿ ಗಿಡಗಳಿಂದ ಈಗ ಹೊಸ ಪ್ರಯೋಜನವೊಂದಿದೆ. ಪಪ್ಪಾಯಿ ಎಲೆಗಳಲ್ಲಿರುವ ಒಂದು ವಸ್ತು ತೀವ್ರ ಬೆನ್ನೆಲುಬಿನ ತೊಂದರೆ — ಚಾಚಿದ ಅಥವಾ ಜಾರಿದ ಮೂಳೆಯ ಚಿಕಿತ್ಸೆಯಲ್ಲಿ ಪರಿಣಾಮಕಾರಿ ಎಂದು ಖಚಿತವಾಗಿದೆ.

ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ನಿನ ಪ್ರಕಾರ ಪಾಲಿನೇಷಿಯನ್ನರು ದೀರ್ಘಕಾಲದಿಂದ ಮಾಂಸವನ್ನು ಮೃದುವಾಗಿಡಲು ಅದನ್ನು ಪಪ್ಪಾಯಿ ಎಲೆಗಳಲ್ಲಿ ಸುತ್ತಿಡುತಿದ್ದರು. ಇಂದು ಮಾಂಸವನ್ನು ಮೃದುವಾಗಿಡಲು ಬಳಸುತ್ತಿರುವ ಆಧುನಿಕ ಸಾಧನಗಳಲ್ಲಿ ಪಪ್ಪಾಯಿ ಎಲೆಗಳಿಂದ ತೆಗೆಯಲಾದ 'ಕೈಮೊಪಾಪ್ಪೇನ್' ಎಂಬ ಒಂದು ಎನ್‌ಜೈಮ್ ಇರುತ್ತದೆ.

ಜಾರಿದ ಮೂಳೆಯಿಂದ ಬಾಧೆಪಡುತ್ತಿರುವ ರೋಗಿಯ ಬೆನ್ನೆಲುಬಿಗೆ ಈ ಎನ್‌ಜೈಮನ್ನು ಇಂಜೆಕ್ಟ್‌ಮಾಡಿದರೆ ಇದೇ ರೀತಿಯ ಅನುಕೂಲಕರ ಪರಿಣಾಮವಾಗಬಹುದೇ ಎಂದು ಅಮೆರಿಕನ್ ಸಂಶೋಧಕರು ಯೋಚಿಸಿದರು. ಅನೇಕ ಸಂದರ್ಭಗಳಲ್ಲಿ ಅದು ಪರಿಣಾಮಕಾರಿಯಾಗುವುದು ಎಂದು ಅವರು ಕಂಡುಕೊಂಡರು. ಜಾರಿದ ಮೂಳೆಗೆ ನೋವನ್ನು ಉಂಟುಮಾಡುವ ಹೊರಚಾಚಿದ ವಸ್ತುವನ್ನು ಅದು ಮೃದುಗೊಳಿಸಿ ಕರಗಿಸುತ್ತದೆ. ಇದುವರೆಗೆ ಏಳುಸಾವಿರಕ್ಕೂ ಹೆಚ್ಚು ರೋಗಿಗಳು ಶಸ್ತ್ರಚಿಕಿತ್ಸೆಗೆ ಬದಲಿಯಾಗಿ ಈ ಹೊಸ ಚಿಕಿತ್ಸೆಯನ್ನು ಪಡೆದಿದ್ದಾರೆ.

ವಾರ್ತಾಸಾರ

ಅಲ್ಪಸಂಖ್ಯಾತ ಮುಸ್ಲಿಮರಾಗಿರುವ ಅಹ್ಮದೀಯರನ್ನು (ಇವರು ಸುಮಾರು 40 ಲಕ್ಷದಷ್ಟಿರುವರು) ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿ "ಅಲ್ಪಸಂಖ್ಯಾತ ಮುಸ್ಲಿಮೇತರ ಸಮಾಜ"ವೆಂದು ಸಾರುವ ನಿರ್ಣಯ ಕೈಕೊಂಡಿದೆ.

ಲಾರಿಗಳ ಮೂಲಕ ಸರಕುಸಾಗಾಟವನ್ನು 500 ಕಿಲೋಮೀಟರಿಗೆ (312 ಮೈಲುಗಳಿಗೆ) ಮಿತಗೊಳಿಸುವಂತೆ ಮಾಡಬೇಕು ಎಂದು ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ತಿಳಿಸಿದೆ. ಡೀಸಿಲ್ ಉಳಿತಾಯವಾಗುವುದೆಂಬುದು ಒಂದು ಕಾರಣ.

ಮೈಸೂರಿನ ಲಲಿತಮಹಲ್ ಅರಮನೆಯು "ಪಂಚತಾರಾ" (Five stars) ಹೊಟೇಲ್ ಆಗಿ ಪರಿವರ್ತಿಸಲ್ಪಟ್ಟು, ತಾ. 13ರಲ್ಲಿ ಕೇಂದ್ರದ ಸಚಿವೆ ಡಾ| ಸರೋಜಿನಿ ಮಹಿಷಿಯವರಿಂದ ಉದ್ಘಾಟನೆ ನಡೆಯಿತು. ಚಾಮುಂಡಿ ಬೆಟ್ಟದ ಕೆಳಗೆ ಮನೋಹರ ಪ್ರಕೃತಿಸೌಂದರ್ಯದ ಪ್ರದೇಶದಲ್ಲಿರುವ ಈ ಅರಮನೆಗೆ 17 ಕೊಠಡಿಗಳಿವೆ; ಒಂದು ಸಭಾಭವನವಿದೆ; ಸ್ವಾಗತಸಮಾರಂಭಗಳಿಗೆ ರಿಸೆಪ್ಶನ್ ಹೋಲ್ ಇದೆ. ಇದು, ಭಾರತದ ಪ್ರವಾಸೋದ್ಯಮ ಇಲಾಖೆಯ ಹದಿಮೂರನೇ ಹೊಟೇಲು; ಅರಮನೆ ಹೊಟೆಲ್‌ಗಳಲ್ಲಿ ಎರಡನೆಯದು. (ಜೈಪುರದ 'ಲಕ್ಷ್ಮೀವಿಲಾಸ' ಅರಮನೆಯು ಮೊದಲನೇ ಅರಮನೆ ಹೊಟೇಲ್ ಆಗಿರುತ್ತದೆ.) 'ಲಲಿತ್‌ಮಹಲ್' ಅರಮನೆ ಹೊಟೇಲಿಗೆ ಇನ್ನೂ 50 ಕೊಠಡಿಗಳನ್ನು ಸೇರಿಸಲಾಗುವುದೆಂದೂ, ಈಜುಕೊಳ ಮತ್ತು ಪೋಲೋ ಆಟದ ಪ್ರದೇಶವನ್ನೂ ರಚಿಸಲಾಗುವುದೆಂದೂ, ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಶನಿನ ಜನರಲ್ ಮೆನೇಜರರಾಗಿರುವ ಶ್ರೀ| ಎಸ್. ಎನ್. ಗೋರೆಯವರು ತಿಳಿಸಿರುವರು.

ಮೈಸೂರು ನಗರದಲ್ಲಿ ವಿಮಾನ ನಿಲ್ದಾಣ ರಚಿಸಲು ತಾನು ಯತ್ನಿಸುವುದಾಗಿ ಸಚಿವೆ ಡಾ| ಸರೋಜಿನಿ ಮಹಿಷಿಯವರು ಹೇಳಿರುವರು. ಇನ್ನೆರಡು ವರ್ಷಗಳಲ್ಲಿ ಹುಬ್ಬಳ್ಳಿಯಲ್ಲಿ, ಸುಮಾರು 50 ಲಕ್ಷ ರೂಪಾಯಿ ವೆಚ್ಚದಲ್ಲಿ ಮುನ್ನೂರು ಎಕರೆ ಪ್ರದೇಶದಲ್ಲಿ ವಿಮಾನನಿಲ್ದಾಣ ರಚಿಸಲಾಗುವುದೆಂದೂ ಸಾರಿದರು.

ಸುಂಕದ ಅಧಿಕಾರಿಗಳು ವಿಶಾಖಪಟ್ಟಣದಲ್ಲಿ, ಗಿರವಿ ವ್ಯಾಪಾರಿಯೊಬ್ಬನಾದವರೊಬ್ಬರ ಮನೆಗೆ ಕಳೆದವಾರ ದಾಳಿಯಿಟ್ಟು ಹದಿನೈದು ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವರೆಂದು ಪ್ರಕಟವಾಗಿದೆ. ಅಗೋಸ್ತು ತಾ. 28ರಲ್ಲಿ, ಮುಂಬಯಿಯಲ್ಲಿ ಇನ್ಕಮ್‌ಟೇಕ್ಸ್ ಅಧಿಕಾರಿಗಳು ಶ್ರೀಮತಿ ಈಶ್ವರಿಬಾಯಿ ಉದ್ಧವದಾಸ ಅಹುಜಾ ಎಂಬವರ ಮನೆಯಿಂದ 18.7 ಲಕ್ಷ ರೂಪಾಯಿ ಬೆಲೆಬಾಳುವ 37 ಕಿಲೋಗ್ರಾಮ್ ಚಿನ್ನವನ್ನು ವಶಪಡಿಸಿಕೊಂಡು, ಶ್ರೀಮತಿ ಈಶ್ವರಿಬಾಯಿಯನ್ನೂ ಅವರ ಮಲಮಗ ಶ್ರೀ| ಗೋಪಾಲದಾಸ ಉದ್ಧವದಾಸ ಅಹುಜಾರನ್ನೂ ಬಂಧಿಸಿರುವರೆಂದು ತಿಳಿದುಬರುತ್ತದೆ.

ಒಂದೇ ಸಂಖ್ಯೆಯ ಹಲವು ಕರೆನ್ಸಿ ನೋಟುಗಳು ನಾಸಿಕದ ಸೆಕ್ಯುರಿಟಿ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟು ಹೊರಗೆ ಚಲನೆಯಲ್ಲಿದ್ದಾಗ ಕಂಡುಹಿಡಿಯಲ್ಪಟ್ಟವು. ಈ ಕುರಿತು ನಿಷ್ಪಕ್ಷಪಾತ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ವಿರೋಧಿ ಪಕ್ಷದ ಸದಸ್ಯರು ಲೋಕಸಭೆಯಲ್ಲಿ ಆಗ್ರಹಪಡಿಸಿರುವರು.

ತಾ. 18ರಲ್ಲಿ ನಡೆದ ಹುಬ್ಬಳ್ಳಿ–ಧಾರವಾಡ ಕಾರ್ಪೊರೇಶನಿನ ಮೇಯರ್ ಮತ್ತು ಉಪ ಮೇಯರ್ ಚುನಾವಣೆಗಳಲ್ಲಿ, ಆಳುವ ಕಾಂಗ್ರೆಸ್ಸು ಎರಡು ಸ್ಥಾನಗಳನ್ನು ಕಳೆದುಕೊಂಡಿತು. ಈ ಪ್ರತಿಷ್ಠೆಯ ಚುನಾವಣೆಯಲ್ಲಿ ಜನಸಂಘ ಮತ್ತು ಸಂಸ್ಥಾ ಕಾಂಗ್ರೆಸ್ ಬೆಂಬಲಿತ ಪಕ್ಷೇತರ ಸದಸ್ಯ ಶ್ರೀ| ಜೆ. ಟಿ. ಮಥಾಯಸ್‌ರವರು, ತನ್ನ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಶ್ರೀ| ಆರ್. ಜಿ. ನಲವಡಿಯವರನ್ನು 13–19 ಮತಗಳಿಂದ ಪರಾಭವಗೊಳಿಸಿ, ಮೇಯರ್‌ರಾಗಿ ಆರಿಸಿಬಂದರು. ಉಪ ಮೇಯರ್ ಸ್ಥಾನಕ್ಕೆ ಸಂಸ್ಥಾ ಕಾಂಗ್ರೆಸ್ಸಿನ ಶ್ರೀ| ಪಿ. ಎಸ್. ಥಾಮ್ಸೆಯವರು ಆಳುವ ಕಾಂಗ್ರೆಸ್ಸಿನ ಅಭ್ಯರ್ಥಿ ಶ್ರೀ| ಎ. ಎ. ಕೊಪ್ಪಳರವರನ್ನು 23–19 ಮತಗಳಿಂದಲೇ ಸೋಲಿಸಿ, ಆಯ್ಕೆಯಾದರು.

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ಸ್ಥಾಯೀ ಸಮಿತಿಯ ಸ್ಥಾಪನೆಯಾಗಿ ಈ ವರ್ಷ 50 ವರ್ಷಗಳು ತುಂಬುವವು. ಬೆಳಗಾಂವಿಯಲ್ಲಿ, ಮುಂದಿನ ವರ್ಷ (1975) ಕರ್ನಾಟಕ ಪ್ರಾಂತಿಕ ಆಯುರ್ವೇದ ಸಮ್ಮೇಲನದ 29ನೇ ಅಧಿವೇಶನ ಜರಗುವಾಗ ಸುವರ್ಣೋತ್ಸವವನ್ನೂ ಜರಗಿಸಬೇಕೆಂದು ಆ ಸಮ್ಮೇಲನದ ಸ್ವಾಗತ ಸಮಿತಿಯನ್ನು, ಪ್ರಾದೇಶಿಕ ಆಯುರ್ವೇದ ಮಂಡಲದ ಸ್ಥಾಯೀ ಸಮಿತಿಯ ಅಧಿವೇಶನವು ಇತ್ತೀಚೆಗೆ ಬಿಜಾಪುರದಲ್ಲಿ ಡಾ| ಎಂ. ಸಿ. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಕೇಳಿಕೊಳ್ಳಲಾಗಿದೆ. ಮಂಡಲದ ಈ ಅಧಿವೇಶನದಲ್ಲಿ ಮಂಡಲದ ನಿವೃತ್ತ ಅಧ್ಯಕ್ಷರೂ ಘನವಿದ್ವಾಂಸರೂ ಆಗಿರುವ ವೈದ್ಯ ಅನಂತಾಚಾರ್ಯರನ್ನು ಸನ್ಮಾನಿಸಲಾಯಿತು. ಮಂಗಳೂರಿನ ಪಾವಂಜೆಯ ದ್ವಿವೇದಿ ಸೀತಾರಾಮ ಆಚಾರ್ಯರು ರಚಿಸಿದ "ಅನಂತಾಚಾರ್ಯ ಸಂಸ್ಕೃತ ಪದ್ಯ ಪುಷ್ಪಮಾಲಿಕಾ"ವನ್ನು, ಮಂಡಲದ ಪರಿಯಿಂದ, ಡಾ| ಎಚ್. ವಿ. ಉಪಾಧ್ಯಾಯರು ಓದಿದರು. ಡಾ| ಶಾಸ್ತ್ರಿಗಳವರು ವೈದ್ಯ ಅನಂತಾಚಾರ್ಯರಿಗೆ ರೇಶ್ಮೆಶಾಲು ಹೊದಿಸಿ, ಶ್ರೀಕೃಷ್ಣನ ಗಂಧದ ಪ್ರತಿಮೆ, ಫಲ-ಪುಷ್ಪಗಳನ್ನಿತ್ತು, ಆಚಾರ್ಯರು ಬಹುಕಾಲ ಆಯುರ್ವೇದದ ಸೇವೆಮಾಡುತ್ತಿರಲೆಂದು ಹಾರೈಸಿದರು.

— —

ಲೇಖಾಂಕ—೧೨೯೫.

ಗೋಚರ ಫಲ—೩೦

(ಶನಿಚಾರ ಫಲ ನವಮದಲ್ಲಿ)

(ಎಂ. ಸುಬ್ರಾಯನ್.)

ಶನಿಯು ಜನ್ಮನಾ ಹೇಗಿರುವನು? ಯಾವ ರಾಶಿಗತನು? ಅವನು ಲಗ್ನಾಧಿಪನಿಗೆ ಎಲ್ಲಿರುವನು? ಎಂಬ ವಿಚಾರ ಮೊದಲು ತಿಳಿದು ಬಳಿಕ ಫಲಕಥನೆಗೆ ಇಳಿಯುವುದು ವಿಹಿತ. ಅನ್ಯಥಾ ಹೇಳಿದ ಫಲ ಹಾಸ್ಯಾಸ್ಪದವಾಗುವುದು. ಜನ್ಮನಾ ಶನಿಯು ಒಳ್ಳೆಯವನಾಗಿದ್ದರೆ ಅವನು ನವಮದಲ್ಲಿ ಬಂದಾಗ ಕೆಡುಕಿನ ಫಲವಿಲ್ಲ. ಶುಭಫಲಗಳೇ ಉಂಟಾಗುವವು. ಶನಿಯು ಯಾವಾಗಲೂ ನೋಡಿದ ಸ್ಥಳ ಕೆಡುಕು. ಇದ್ದ ಭಾವ ಶುಭ. ನೋಡಿದ ಭಾವ ಅನಿಷ್ಟ. ಈ ವಿಷಯದಲ್ಲಿ ತತ್ವಪ್ರದೀಪಕಾರನು ಈ ಕೆಳಗಿನಂತೆ ಹೇಳಿರುವನು.

ಲೋಕೇ ವೇದೇ ಪ್ರಸಿದ್ಧಾಃ ಸಕಲ
ಶುಭಹರಾ ನೀಚಗಾಃ ಪಾಪಖೇಟಾಃ।
ಸ್ವೋಚ್ಚೇ ನೈವಪ್ರಶಸ್ತಾ ವಿಮಲ
ಫಲಹರಾ ರಂಧ್ರರಿಫಾರಿಯುಕ್ತಾಃ।
ಜೀವಃ ಸ್ವಸ್ಥಾನ ಹಂತಾ ವದತಿ
ಮುನಿವರೋ ದೃಷ್ಟಿರಸ್ಯ ಪ್ರಶಸ್ತಾ।
ಸೌರಿ ಸ್ವಸ್ಥಾ ಫಾಲಃ ಪರಮಭಯ
ಕರೀ ದೃಷ್ಟಿರಸ್ಯ ಪ್ರಣಷ್ಟಾ॥

ಈ ಮಾತಿನಿಂದ ಗುರುದೃಷ್ಟಿ ಶುಭ. ಅವನಿರುವ ಭಾವ ಅಶುಭ ಎಂದೂ ಶನಿಸ್ಥಿತ ಭಾವ ಶುಭ ದೃಷ್ಟಭಾವ ಕೆಡುಕೆಂದೂ ತಿಳಿಯಬೇಕಿದೆ. ಶನಿ ಯಾವಕ್ಕೆ ದೃಷ್ಟಿಯನ್ನು ಕೊಡುವನೋ ಆ ಭಾವ ಫಲ ನಷ್ಟಗೊಳಿಸುವನೆಂಬುದು ಸಿದ್ಧವಾಗುತ್ತಿದೆ.

ಜನ್ಮನಾ ಶುಭನಾಗಿ ಶನಿ ಇದ್ದರೆ ಯಶಸ್ಸನ್ನು ಹೊಂದುವಂತೆ ಇರುವ ಕೆಲಸಗಳಾಗುವವು. ಕೈಯಲ್ಲಿ ಸಂಪತ್ತಿನ ಉರುಳಾಟ ಚೆನ್ನಾಗಿರುವುದು. ಹೊಸ ಹೊಸ ಉದ್ಯೋಗ ವ್ಯವಸಾಯಗಳ ಕಲ್ಪನೆ ಹೊಳೆದುಬರುವುದು. ಪ್ರವಾಸವಾಗುವುದು. ಉದ್ಯೋಗದಲ್ಲಿರುವವರು ಗ್ರೇಡು ಭಡ್ತಿಗಳನ್ನು ಹೊಂದಿಬರುವರು. ಆಶಿಸಿದ ಸ್ಥಳದ ಬದಲಾವಣೆ ವರ್ಗಾವರ್ಗಿಗಳಾಗುವವು. ಸಂತತಿಯ ಸುಖಲಾಭ ಬರುವುದು. ಅಶುಭನಾಗಿರುವನಾದರೆ ಸಹೋದರ ಸಹೋದರಿಯರ ಕುಟುಂಬ ನಾಶ ಸಂಪರ್ಕ ಬರುವುದು. ಅವರನ್ನು ಪೋಷಿಸಲಿರುವ ಜವಾಬ್ದಾರಿಕೆಯಾಗುವುದು. ಅಲ್ಲದೆ ಸಹೋದರರಲ್ಲಿ ಮರಣವಾಗುತ್ತಿದೆ. ಸಹೋದರಿಗೆ ಗಂಡನ ಸುಖ ಇಲ್ಲದಾಗುವುದು. ಅದೂ ಅಲ್ಲದೆ ತನ್ನ ಮಕ್ಕಳಿಗೆ ಕೆಡುಕೆನಿಸುವುದು. ಗರ್ಭಪಾತ ಸಂತಾನ ನಾಶಗಳಿಗೆ ಘಟನೆ ತೋರಿಬರುವುದು. ಶನಿಗೆ ತೃತೀಯ ದಶಮಗಳಿಗೆ ವಿಶೇಷ ದೃಷ್ಟಿ. ಅದೂ ಅಲ್ಲದೆ ಸಹೋದರರು ವಂಚನೆಯಿಂದ ಮುಳುಗಿಸ ಹೊರಡುವರು. ಗ್ರೇಡು ಪ್ರಮೋಶನುಗಳು ಕೆಲಸದವರಿಗೆ ತಡೆಗೊಳ್ಳುವುದು.

ಶನಿಯು ಚಲಿತ ರೀತಿಯಿಂದ ಗುರುವಿನ ಮೇಲೆ ಪರಿಭ್ರಮಣೆಯ ಕಾಲದಲ್ಲಿ ಗುರು ಬಲಿಷ್ಠನಾಗಿದ್ದರೆ ಆ ಕಾಲದಲ್ಲಿ ಉದ್ಯೋಗ ವ್ಯವಸಾಯದಲ್ಲಿ ಉನ್ನತಿ ಏರಿಕೆಗಳ ಕಾಲವಾಗುತ್ತಿರುವುದು. ಹಣದ ಕೂಡಿಕೆಯಾಗುತ್ತದೆ. ತನ್ನ ಸಂಪಾದನೆಯಲ್ಲಿ ಉಳಿತಾಯದ ನೆಲೆಗೊಳಿಸಿ ಬರುವಿಕೆಯಾಗುತ್ತಿರುವುದು. ಆಗ ಉಳಿಕೆಗೊಳಿಸಿ ಅದನ್ನು ವೃದ್ಧಿಗೆ ತರುವ ಕಾಲ. ಸಂಪತ್ತಿನ ಬೆಳೆಯುವಿಕೆ ಕೂಡಿದ ಕಾಲವೆಂದು ತಿಳಿಯುವುದು.

ಯಾವುದಾದರೂ ಕೋರ್ಟುವ್ಯವಹಾರಗಳಿದ್ದರೆ ಆ ವ್ಯವಹಾರ ಗೆಲವು ಉಂಟಾಗುತ್ತದೆ. ನವಮದ ಗುರು ಇದ್ದು ಶನಿ ಯೋಗವಾದರೆ ಸಂಪತ್ತಿನ ನೆಲೆಯಿಂದ ಉತ್ತಮಸ್ಥಿತಿಯ ಹೊಂದಿಕೆಯಾಗುತ್ತದೆ. ಜನ್ಮದ ಗುರು ಅನುಕೂಲನಲ್ಲವಾಗಿದ್ದರೆ ಈ ಯೋಗಕ್ಕೆ ಒಡಕು ಕಾಣಬಹುದು. ಶನಿಯು ತನ್ನ ಭ್ರಮಣೆಯ ಕಾಲದಲ್ಲಿ ಅವನು ಸೇರಿದ ಗ್ರಹರ ಮೇಲೆಯೂ ಪ್ರಭಾವ ಬೀರುತ್ತಿರುವನು. ಪಾಪಗ್ರಹರ ಮೇಲೆ ಅವನ ಸಂಚಾರವಾಗುತ್ತಿದ್ದಾಗ ಸಹೋದರ ಬಂಧುವರ್ಗೀಯರ ಮೇಲೆ ದೋಷ ಪರಿಣಾಮ ಮಾಡುತ್ತಿರುವನು. ಸಹೋದರ ಸಹೋದರೀವರ್ಗದಲ್ಲಿ ಕಿರಿಯ ಹಿರಿಯ ಸ್ಥಾನಗಳಿಗೆ ಅನಿಷ್ಟವೋ ಎಂಬುದನ್ನು ಏಕಾದಶದಲ್ಲಿ ತೃತೀಯದಲ್ಲಿ ನೆಲಸಿರುವ ಗ್ರಹನಿಂದ ನಿರ್ಣಯಿಸಬೇಕಿದೆ. ಏಕಾದಶದಲ್ಲಿ ಕುಜನಿದ್ದರೆ ಏಕಾದಶದ ಕುಜನ ಮೇಲೆ ಶನಿಯ ಪರಿಭ್ರಮಣೆ ಜ್ಯೇಷ್ಠಸ್ಥಾನದವರಿಗೆ ಹಾನಿಯಾಗುತ್ತಿರುವುದು. ತೃತೀಯದಲ್ಲಿ ಕುಜನಿದ್ದರೆ ತನ್ನಿಂದ ಕಿರಿಯ ಸಹೋದರರಿಗೆ ಅನಿಷ್ಟ ನಾಶಗಳಾಗುತ್ತಿರುವವು.

ವ್ಯಯ ಷಷ್ಠ ತೃತೀಯಾಷ್ಟಮ ಭಾವಗಳಲ್ಲಿ ಪಾಪಗ್ರಹರಿದ್ದು ಶನಿಯ ಪರಿಭ್ರಮಣೆ ಅವರ ಮೇಲೆ ಆದರೆ ಆಗ ತನ್ನಯಾ ಕೌಟುಂಬಿಕ ಕ್ಲೇಶ ದುಃಖ ಹಾನಿಗಳ ಘಟನೆಯಾಗುತ್ತಿರುವುದು.

ಗ್ರಹಗಳು ಅನಿಷ್ಟವನ್ನು ಕೊಡುವ ಕಾಲ ಅವರ ಪ್ರೀತಿಕಾರ್ಯವನ್ನು ಮಾಡುವುದು ಹಿತ. ರೋಗಕ್ಕೆ ಮದ್ದನ್ನು ರೋಗಕ್ಕೆ ಸಂಬಂಧಿಸಿದ ಮದ್ದನ್ನು ಕೊಟ್ಟರೆ ಅದು ಗುಣಗೊಳ್ಳುತ್ತಿದೆ ಎಂಬುದನ್ನು ಎಲ್ಲರೂ ಒಪ್ಪುವರು. ಗ್ರಹಗಳು ಆಕಾಶದಲ್ಲಿ ಸಂಚರಿಸುತಿದ್ದು ಜನ್ಮದ ಸ್ಥಿರ ರಾಶಿ ಚಕ್ರದ ಮೇಲೆ ಪರಿಣಾಮದ ಬೀರುವಿಕೆಯನ್ನು ತಪ್ಪಿಸಲೆಂದೇ ಪರಿಹಾರ ಮಾರ್ಗವನ್ನು ಶಾಸ್ತ್ರಕಾರರು ಹೇಳಿರುವರು. ಯುದ್ಧದ ವಿಮಾನಗಳು ಧಾಳಿ ನಡೆಸುತಿದ್ದರೆ ಆ ಕಾಲದಲ್ಲಿ ಮಾಡತಕ್ಕ ರಕ್ಷಣೋಪಾಯದಂತೆ ಗ್ರಹಗಳ ಪ್ರೀತಿಕಾರ್ಯವನ್ನು ಮಾಡುವುದು. ಮಾನವಕುಲದ ಕಷ್ಟಗಳನ್ನು ನೀಗಿಬರುವುದಕ್ಕಾಗಿ ಶಾಸ್ತ್ರಗಳು ಹೊರಟಿವೆ. ವಿವಿಧ ಶಾಸ್ತ್ರಗಳೂ ಈ ಕೆಲಸಮಾಡುತ್ತಿವೆ. ಮಾನವನು ದಾನವನಾಗಹೊರಟು ಇದನ್ನು ಮರೆಯುವನು.

(ಸಶೇಷ)

— —

(2ನೇ ಪುಟದಿಂದ)

ವಿತ್ತು. ಇಲ್ಲೇ ಪ್ರಾಣಿಶಾಸ್ತ್ರಜ್ಞ ಬೇಟೆಗಾರನ ಬುದ್ಧಿಯನ್ನು ಪ್ರಯೋಗಿಸಿದುದು. ಹೀಗೆ ಹುಲಿಯನ್ನು ಪ್ರಾಣಿಧಾಮಕ್ಕಾಗಿ ರಕ್ಷಿಸಲಾಯಿತು.

ಪ್ರಪಂಚದ ವನ್ಯಜೀವಿ ನಿಧಿಯ ಬ್ರಿಟಿಷ್ ಪ್ರತಿನಿಧಿ ಶ್ರೀಮತಿ ಜನ್ ರೈಟ್ ಅವರ ಸಲಹೆಯ ಮೇರೆಗೆ ಪಶ್ಚಿಮ ಬಂಗಾಳ ಸರ್ಕಾರ ಡಾ| ಸೀಡೆನ್‌ಸ್ಟಿಕರರನ್ನು ಆಹ್ವಾನಿಸಿತು. ಸ್ಮಿತ್‌ಸೋನಿಯನ್ ಸಂಸ್ಥೆ ಒಡನೆಯೇ ಪಶ್ಚಿಮ ಬಂಗಾಳ ಸರ್ಕಾರದ ಪ್ರಾರ್ಥನೆಗೆ ಒಪ್ಪಿ ಡಾ| ಸೀಡೆನ್‌ಸ್ಟಿಕರ್‌ರ ಸೇವೆಯನ್ನು ಎರವಲು ನೀಡಿತು.

— —

ಬ್ಯಾಂಕ್ ನೌಕರರ ಸಮ್ಮೇಳನ

ದ. ಕ. ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಥಮ ಸಮ್ಮೇಳನವು ತಾ. 14 ರಂದು ಸಂಜೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಅ. ಭಾ. ಬ್ಯಾಂಕ್ ನೌಕರರ ಸಂಘದ ಕೌನ್ಸಿಲ್ ಸದಸ್ಯ ಕಾಮ್ರೇಡ್ ಕೆ. ದಿನಕರ ಹೊಳ್ಳರ ಅಧ್ಯಕ್ಷತೆಯಲ್ಲಿ ನಡೆದಾಗ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಕಾಮ್ರೇಡ್ ಪ್ರಭಾತ್‌ಕರ್ ಮತ್ತು ಉಪಾಧ್ಯಕ್ಷ ಕಾಮ್ರೇಡ್ ಪಿ. ಎಸ್. ಸುಂದರೇಶನ್ ಅವರು ಭಾಷಣಮಾಡಿದರು.

ವಿದ್ಯಾರ್ಥಿ ಬ್ಯಾಂಕ್ ಉದ್ಘಾಟನೆ

ಭಾರತ ಸರಕಾರದ ಸಣ್ಣ ಉಳಿತಾಯ ಯೋಜನೆಯ ಅಂಗವಾಗಿ ಕಾರ್ಕಳ ತಾಲೂಕ ಬೋಳಕೋಡಿ ಎಯಿಡೆಡ್ ಹಾಯರ್ ಪ್ರೈಮರಿ ಶಾಲೆಯಲ್ಲಿ ಸಂಚಯಕ ವಿದ್ಯಾರ್ಥಿ ಬ್ಯಾಂಕನ್ನು ಜಿಲ್ಲಾ ಉಳಿತಾಯ ಅಧಿಕಾರಿ ಶ್ರೀ| ಸಿ. ಮೋಹನ್ ಕಾಮತರು ಇತ್ತೀಚೆಗೆ ಉದ್ಘಾಟಿಸಿದರು. 130 ಪಾಸ್ ಪುಸ್ತಕಗಳನ್ನು ಸಮಾರಂಭದಲ್ಲಿ ವಿತರಣೆಮಾಡಲಾಯಿತು.

— —

ಸಾಗರಯಾನದ ಸಹಕಾರಿ; ದೀಪಗೃಹ

ಭಾರತ ಕರಾವಳಿಯಲ್ಲಿ ದೀಪಗಳ ಮಾಲೆಯಂತೆ ಗೋಚರವಾಗುವ ದೀಪಸ್ತಂಭಗಳು ಸುಗಮ ಸಾಗರಯಾನಕ್ಕೆ ಬಹು ಸಹಕಾರಿ. ಸುಮಾರು 7800 ಕಿಲೋಮೀಟರ್ ಅಂತರದ ಕರಾವಳಿಯಲ್ಲಿ ಹತ್ತು ಬೃಹತ್ ಬಂದರುಗಳು, ಸುಮಾರು 300 ದೀಪಗೃಹಗಳು ಇವೆ. ದೀಪದೋಣಿಗಳು, ಶಬ್ದ ಮತ್ತು ಜಲಾಂತರ್ಗಾಮಿ ಸಂಕೇತಗಳು, ಸದಚ್ಛಾಜ್ಯೋತಿಗಳು ಮತ್ತು ಸರಪಣಿ ಸೌಲಭ್ಯಗಳು ಇಲ್ಲಿವೆ.

ನೌಕಾಪಥದಲ್ಲಿ ಅಡಚಣೆ ತರುವ ಕಾಲುವೆ, ಕಿರುದಾರಿಗಳ ಬಗ್ಗೆ ದೀಪಗೃಹಗಳು ಹಡಗುಗಳಿಗೆ ಎಚ್ಚರಿಕೆ ನೀಡುತ್ತವೆ. ಬಂದರುಗಳಿಗೆ ಆಗಮಿಸುವಾಗ ಹಡಗುಗಳು, ಅವುಗಳಲ್ಲಿನ ಸಿಬ್ಬಂದಿ, ಸರಕು ಇತ್ಯಾದಿಗಳಿಗೆ ಸುರಕ್ಷತೆ ನೀಡುತ್ತವೆ.

ಭಾರತ, ಸುಮಾರು 30 ಶತಮಾನಗಳಿಂದ ವಿದೇಶಗಳೊಂದಿಗೆ, ನೆರೆಹೊರೆಯ ರಾಷ್ಟ್ರಗಳೊಂದಿಗೆ ವಾಣಿಜ್ಯ ಸಂಬಂಧವನ್ನು ಬೆಳೆಸಿಕೊಂಡಿದೆ. ತರಬೇತಿ ಪಡೆದ ಪಕ್ಷಿಗಳನ್ನು ತಮ್ಮ ಹಿಂದಿನ ನಾವಿಕರು ತಮ್ಮೊಂದಿಗೆ ಕರೆದೊಯ್ಯುತ್ತಿದ್ದರು. ದಾರಿ ಕಾಣದಾದಾಗ ತಮ್ಮೊಂದಿಗಿರುವ ಪಕ್ಷಿಗಳನ್ನು ಹಾರಿಸುತ್ತಿದ್ದು ಅವು ಭೂಪ್ರದೇಶವಿರುವತ್ತ ಹಡಗುಗಳು ಸಂಚರಿಸಲು ನೆರವಾಗುತ್ತಿದ್ದವು. ಕಾಲವುರುಳಿದಂತೆ ನಾವಿಕರು ಪಕ್ಷಿಗಳ ಬದಲು ಎಣ್ಣೆ ದೀಪಗಳು ಮತ್ತು ಬತ್ತಿ ದೀಪಗಳನ್ನು ಬಳಸಲಾರಂಭಿಸಿದರು.

ಮೌರ್ಯಕಾಲದಲ್ಲಿ ಹಡಗು ಕೈಗಾರಿಕೆ ಉಚ್ಛ್ರಾಯಸ್ಥಿತಿಗೆ ಬಂದಿತು. ಅಂದಿನ ದೊರೆಗಳು ನಾವಿಕ-ಹಡಗುಗಳ ಸಂಚಾರ ಇವುಗಳಿಗೆ ಮಹತ್ವದ ಆದ್ಯತೆ ನೀಡಿದರೆಂಬ ಬಗ್ಗೆ ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳು ಇವೆ. ಮೊಘಲರ ಕಾಲದಲ್ಲೂ ಈ ದಿಶೆಯಲ್ಲಿನ ಆದ್ಯತೆ ಮತ್ತಷ್ಟು ಏರಿತು. ಬ್ರಿಟಿಶರ ಆಳ್ವಿಕೆಯಲ್ಲೂ ನಾವಿಕರಿಗೆ ಉತ್ತೇಜನ ದೊರಿತದ್ದು ಅಲ್ಲಿಗೆ ಹೆಸಗುಯಾನಕ್ಕೆ ನೆರವಾಗುವ ವಿವಿಧ ಯಾಂತ್ರಿಕ ಸಾಧನಗಳನ್ನು ಬಳಸಲಾರಂಭಿಸಿದರು.

ದೀಪಗೃಹಗಳ ವ್ಯವಸ್ಥೆ ಆರಂಭ

1927ರವರೆಗೆ ದೀಪಗೃಹಗಳ ಸೌಲಭ್ಯದ ಆಡಳಿತ ಸುವ್ಯವಸ್ಥಿತ ರೀತಿಯಲ್ಲಿರಲಿಲ್ಲ. ವಿವಿಧ ಆಡಳಿತ ವ್ಯವಸ್ಥೆಗಳಲ್ಲಿ ವಿವಿಧ ಸ್ಥಳೀಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು ದೀಪಗೃಹ ತಾಂತ್ರಿಕ ಬೆಳವಣಿಗೆಗೆ ಕಷ್ಟ ಸಾಧ್ಯವಾಗಿಯೇ ಉಳಿಯಿತು.

ದೀಪಗೃಹಗಳ ಕಡ್ಡಾಯ ವ್ಯವಸ್ಥೆಯ ದೃಷ್ಟಿಯಿಂದ 1929ರ ಭಾರತದ ದೀಪಗೃಹ ಕಾನೂನು ಜಾರಿಗೆ ಬಂದಿತು. ಅಂದಿನಿಂದೀಚೆಗೆ ದೀಪಗೃಹಗಳ ವ್ಯವಸ್ಥೆಗೆ ಸಂಬಂಧಿಸಿದಂತೆ ಮಹತ್ವದ ಅಭಿವೃದ್ಧಿಯಾಗಿದೆ.

ಪ್ರಸ್ತುತದಲ್ಲಿ ಡೈರೆಕ್ಟರ್ ಜನರಲ್ ನಾಯಕತ್ವದ ದೀಪಗೃಹದ ಮತ್ತು ದೀಪದೋಣಿಗಳ ಇಲಾಖೆ ಸರ್ಕಾರಕ್ಕೆ ತಾಂತ್ರಿಕ ಮತ್ತು ಆಡಳಿತ ಸೂತ್ರಗಳ ಬಗ್ಗೆ ಸಲಹೆ ನೀಡುತ್ತಿವೆ. ದೀಪಗೃಹಗಳ ದುರಸ್ತಿ, ರಕ್ಷಣೆ, ಬದಲಾವಣೆ ನಿರ್ಮಾಣ ಸಂಶೋಧನೆಗಳನ್ನು ಕೈಗೊಳ್ಳುತ್ತದೆ. ರಾಷ್ಟ್ರದ ಕರಾವಳಿ ಪ್ರದೇಶವನ್ನು ನಾಲ್ಕು ಜಿಲ್ಲೆಗಳಾಗಿ ವಿಂಗಡಿಸಿದ್ದು ಪ್ರತಿ ಜಿಲ್ಲೆಯೂ ಒಬ್ಬೊಬ್ಬ ದೀಪಗೃಹ ಮತ್ತು ದೀಪದೋಣಿಗಳ ಡೈರೆಕ್ಟರ್‌ರ ನಿಯಂತ್ರಣದಲ್ಲಿದೆ. ಮದರಾಸು, ಕಲ್ಕತ್ತಾ, ಜಮ್ನಾಗರ್ ಮತ್ತು ಮುಂಬೈಗಳಲ್ಲಿ ನಾಲ್ಕು ದೀಪಗೃಹ ಕಾರ್ಯಾಗಾರಗಳಿವೆ. ಕಲ್ಕತ್ತಾದಲ್ಲಿ ಗಾಜು ಸಂಶೋಧನಾ ಪ್ರಯೋಗಾಲಯವೊಂದಿದೆ.

ಉತ್ತಮ ಸೌಲಭ್ಯಗಳು

ಕಳೆದ ಕೆಲವು ದಶಕಗಳಲ್ಲಿ ದೀಪಗೃಹ ತಂತ್ರಶಾಸ್ತ್ರದಲ್ಲಿ ಮಹತ್ವದ ಪ್ರಗತಿ ಕಂಡುಬಂದಿದೆ. ಪರಿಣಾಮವಾಗಿ ನಾವಿಕರು ಮತ್ತು ಮತ್ಸ್ಯೋದ್ಯಮಿಗಳಿಗೆ ನೆರವಾಗುವ ವಿವಿಧ ಸೌಲಭ್ಯಗಳು ಲಭ್ಯವಾಗಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ನಾವಿಕರ ನೆರವು ಸಾಧನ ತಯಾರಿಕೆಗೆ ಆದ್ಯತೆ ನೀಡಲಾಗಿದೆ. ಐದನೆ ಪಂಚವಾರ್ಷಿಕ ಯೋಜನೆಯಲ್ಲಿ 1200 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು ಇದರಲ್ಲಿ 350 ಲಕ್ಷ ರೂ. ವಿದೇಶಿ ವಿನಿಮಯವೂ ಸೇರಿದೆ.

——

ನುಂಗಿದ ವಸ್ತುಗಳನ್ನು ಹೊರತೆಗೆಯಲು ಬೆಲೂನ್‌ಗಳ ಬಳಕೆ

ಎಲ್ಲ ಮಕ್ಕಳೂ ಬೆಲೂನ್‌ಗಳನ್ನು ಇಷ್ಟಪಡುತ್ತದೆ. ಆದರೆ ಮಕ್ಕಳು ನಾಣ್ಯಗಳು ಮತ್ತಿತರ ವಸ್ತುಗಳನ್ನು ಎಷ್ಟು ಪ್ರೀತಿಸುತ್ತವೆಂದರೆ ಅನೇಕ ಸಂದರ್ಭಗಳಲ್ಲಿ ಅವುಗಳನ್ನು ನುಂಗಿಬಿಡುತ್ತವೆ. ಈಗ ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಮೆಡಿಸಿನ್‌ನ ವಿಜ್ಞಾನಿಗಳ ಒಂದು ತಂಡದವರು, ಇಂಥ ಮಕ್ಕಳನ್ನು ಆಸ್ಪತ್ರೆಗೆ ಸೇರಿಸುವ ಅಥವಾ ಶಸ್ತ್ರಚಿಕಿತ್ಸೆಯ ಅಗತ್ಯವಿಲ್ಲದೆಯೇ ಅವು ನುಂಗಿದ ವಸ್ತುಗಳನ್ನು ಹೊರತೆಗೆಯಲು ಒಂದು ಸಾಧಾರಣ ಹಾಗೂ ಸುರಕ್ಷಿತ ಬೆಲೂನನ್ನು ಬಳಸುವ ಒಂದು ತಂತ್ರವನ್ನು ಅಭಿವೃದ್ಧಿಗೊಳಿಸಿದ್ದಾರೆ.

ಒಂದು ಚಿಕ್ಕ ಫ್ಲೆಕ್ಸಿಬಲ್ ಕೊಳವೆಯ ತುದಿಗೆ ಜೋಡಿಸಲಾದ ಒಂದು ಗಾಳಿ ತೆಗೆದ ಬೆಲೂನನ್ನು ಮೂಗಿನ ಮೂಲಕ ಮಗುವಿನ ಗಂಟಲಿಗೆ ಒಳಸೇರಿಸಲಾಗುತ್ತದೆ. ಫ್ಲೋರೊಸ್ಕೋಪ್ ಎಂಬ ಒಂದು ಸಾಧನದ ಮೂಲಕ ಅದನ್ನು ವೀಕ್ಷಿಸುತ್ತಿರುವಂತೆಯೇ ಬೆಲೂನನ್ನು ಆ ವಸ್ತು ಇರುವ ಸ್ಥಳದ ಕೆಳಭಾಗಕ್ಕೆ ಜಾರಿಸಲಾಗುತ್ತದೆ. ಅನಂತರ ಬೆಲೂನ್‌ಗೆ ಗಾಳಿ ತುಂಬಲಾಗುವುದು. ಈ ಮೂಲಕ ಗಂಟಲನಾಳ ಸ್ವಲ್ಪ ದೊಡ್ಡದಾಗಿ ನುಂಗಿದ ವಸ್ತುವು ಬೆಲೂನಿಗೆ ಮುಂಚೆಯೇ ಹೊರಬರುವುದು.

——

ನೆರೆಪೀಡಿತರಿಗೆ ನೆರವು

ದಕ್ಷಿಣ ಕನ್ನಡ ಜಿಲ್ಲೆಯ ನೆರೆಪೀಡಿತರ ಪುನರ್ನಿವೇಶನ ಕಾರ್ಯಕ್ಕಾಗಿ ಮಹಾರಾಷ್ಟ್ರ ಮುಖ್ಯಮಂತ್ರಿಯವರು, ಪರಿಹಾರ ನಿಧಿಯಿಂದ ಹೊರತಾಗಿ ರೂ. 10,000ದ ಚೆಕ್ಕೊಂದನ್ನು ದ. ಕ. ಜಿಲ್ಲಾ ನೆರೆಪರಿಹಾರ ಸಮಿತಿಗೆ ಕಳಿಸಿಕೊಟ್ಟಿರುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಶ್ರೀ ವಿಷ್ಣುಮೂರ್ತಿ ದೇವಾಲಯ, ಕುಲಾಯಿ (ದ. ಕ.)

ಶ್ರೀ ಶೃಂಗೇರಿ ಶಾರದಾಪೀಠಾಧಿಪತಿಗಳ ಆಪ್ತ ಸಹಾಯಕ
"ಗುರುಭಕ್ತತಿಲಕ" ಶ್ರೀ| ಪದ್ಮನಾಭ ಉಪಾಧ್ಯಾಯರಿಗೆ
'ಶ್ರದ್ಧಾಂಜಲಿ'

ಶ್ರೀ ರಾಮಕೃಷ್ಣ ಜಲಧೇಃ ಪದ್ಮನಾಭಾಖ್ಯ ಚಂದ್ರಮಾಃ ।
ಜಾತಃ, ಶೃಂಗಾದ್ರಿಗೋ ಭಾತಿ ಸತಾಮಾಹ್ಲಾದಕಾರಕಃ ॥ ೧ ॥

ಶಾರದಾಂಬಾ ಚಂದ್ರಮೌಳಿ ಗುರೂಣಾಂ ಪಾದಕಿಂಕರಃ ।
'ಉಪಾಧ್ಯಾಯಾ'ಖ್ಯತಾಂ ಪ್ರಾಪ್ತಃ ವಿದ್ಯಾಲಂಕಾರ ಸಂಯುತಃ ॥ ೨ ॥

ಆಸೇತು ಹಿಮಶೈಲಾಂತಂ ಪ್ರಖ್ಯಾತೋಽಗಾತ್ ದಿವಂ ಮುದಾ ।
ತೇನಾಽಸ್ಮಾಕಂ ಹೃದಾಕಾಶೇ ಸನ್ನಿಧಿಃ ಕ್ರಿಯತೇ ಸದಾ ॥ ೩ ॥

ಶ್ರೀ ಪದ್ಮನಾಭಾಖ್ಯ 'ಮಹಾದ್ವಿಜಸ್ಯ'
ಸತ್ಕರ್ಮಜಾಲಂ ಪ್ರವಿಭಾತಿ ಭೂಮೌ ॥
ಏತತ್ಫಲಂ ಸೋಽಮರ ಲೋಕಗೋಽಪಿ
ಸೌಖ್ಯಂ ಲಭೇತ್ ಶಾಶ್ವತ ಕೀರ್ತಿಯುಕ್ತಂ ॥ ೪ ॥

(7–9–74) ವಿದ್ವಾನ್ ವೆಂಕಟರಾಯಾಚಾರ್ಯ, ಸುರತ್ಕಲ್.

ನವಮಂಗಳೂರು ಬಂದರದಲ್ಲಿ ಪ್ರಥಮ ಭಾರತೀಯ ನೌಕೆ

ಕರ್ನಾಟಕ ರಾಜ್ಯದ 'ಕೊಂಕಣ್ ಕ್ಯಾರಿಯರ್ಸ್' ಸಂಸ್ಥೆಯ, ಕೊಚ್ಚಿ–ಮಂಗಳೂರು–ಮುಂಬೈ ನಡುವೆ ಸರಕು ಸಾಗಾಟದ ಹಡಗಾಗಿ ಕಾರ್ಯನಿರ್ವಹಿಸಲಿರುವ 'ಮರಿಯಾನ' ಸಪ್ಟೆಂಬರ್ 7ರಂದು ನವಮಂಗಳೂರು ಬಂದರವನ್ನು ಪ್ರವೇಶಿಸಿತು. ಇದು ನವಮಂಗಳೂರು ಬಂದರ ಪ್ರವೇಶಿಸಿದ ಪ್ರಪ್ರಥಮ ಭಾರತೀಯ ನೌಕೆ ಎನಿಸಿದೆ. ಈ ಮುಂಚೆ ಬಂದರವನ್ನು ಪ್ರವೇಶಿಸಿದ ಹಡಗಗಳೆಲ್ಲವೂ ವಿದೇಶೀ ಒಡೆತನದ್ದಾಗಿದ್ದುವು.

ಕೊಲೆ ಸಂಬಂಧ ಬಂಧನಗಳು

ಅಕರ್ಳದ ನಿವಾಸಿ ನಾರ್ಣಪ್ಪ ಪೂಜಾರಿ ಎಂಬವನನ್ನು ಅಗೋಸ್ತು 28ರಂದು ರಾತ್ರಿ ರಸ್ತೆಗೆಳೆದು ತಂದು ಹೊಡೆದು ಬಡಿದು ತಿವಿದು ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿ ಶೇಷಪ್ಪ ಪೂಜಾರಿ, ಬಾಬು ಪೂಜಾರಿ, ಯಶವಂತ, ಹರಿಶ್ಚಂದ್ರ ಮತ್ತು ಜೇಬಿ ಎಂಬ ಐವರ ದಸ್ತಗಿರಿಯಾಗಿದೆ.

ಪಾಂಡ್ಯರಾಜ ಬಲ್ಲಾಳ ಸ್ಮಾರಕ ಆಟದ ಮೈದಾನು

'ಬಲ್ಲಾಳ್ ಮೋಟರ್ಸ್' ಸಂಸ್ಥೆಯ ಸ್ಥಾಪಕ ದಿ| ಕೆ. ಪಾಂಡ್ಯರಾಜ ಬಲ್ಲಾಳರ ಸ್ಮರಣಾರ್ಥ ಮೂಡಬಿದ್ರೆಯ ಬಾಬೂ ರಾಜೇಂದ್ರಪ್ರಸಾದ ಪ್ರೌಢಶಾಲೆಗೆ ಸುಮಾರು 10,000 ರೂಪಾಯಿ ಅಂದಾಜು ವೆಚ್ಚದಲ್ಲಿ ಸುಸಜ್ಜಿತ ಆಟದ ಮೈದಾನೊಂದನ್ನು ರಚಿಸುವರೆ ಇತ್ತೀಚೆಗೆ ಶ್ರೀ| ಎಸ್. ಎಸ್. ಮೂಡಬಿದ್ರೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ನಿರ್ಣಯ ಕೈಕೊಳ್ಳಲ್ಪಟ್ಟಿದೆ.

ಸ್ಕೌಟ್-ಗೈಡ್ ಶಿಬಿರ

ತಾಲೂಕು ಮಟ್ಟದ ಸ್ಕೌಟ್-ಗೈಡ್ ಪದಕಾರ್ಜನ ಶಿಬಿರವೊಂದು ಇತ್ತೀಚೆಗೆ ಮೂಡಬಿದ್ರೆಯ ಸಮಾಜಮಂದಿರದಲ್ಲಿ ಯಶಸ್ವಿಯಾಗಿ ನಡೆಯಿತು. ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ| ಎಸ್. ಎಂ. ಅಡ್ಯಂತಾಯರು ಶಿಬಿರವನ್ನು ಉದ್ಘಾಟಿಸಿದರು. 110 ಮಂದಿ ಈ ಶಿಬಿರದಲ್ಲಿ ಭಾಗವಹಿಸಿದ್ದರು.

ರಾಜ್ಯ ಮೀನುಗಾರರ ಪರಿಷತ್ತು

ಅಖಿಲ ಕರ್ನಾಟಕ ಮೀನುಗಾರರ ಪರಿಷತ್ತಿನ ಆಡಳ್ತ ಸಮಿತಿಯ ಸಭೆಯು ಮಂಗಳೂರಲ್ಲಿ ಪರಿಷತ್ತಿನ ಅಧ್ಯಕ್ಷ ಡಾ| ಎಸ್, ಚಂಪಾ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿದಾಗ, ಮೀನುಗಾರರು ಎದುರಿಸುತ್ತಿರುವ ಕೆಲವು ಗಹನ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಮುಂದಿನ ಕಾರ್ಯಕ್ರಮ ಕೈಗೊಳ್ಳುವರೆ ರಾಜ್ಯ ಮೀನುಗಾರರ ೯ನೇ ಪರಿಷತ್ತನ್ನು ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ಜರಗಿಸುವರೆ ನಿರ್ಣಯಿಸಲಾಯಿತು.

ಹೊಸ ಹುದ್ದೆ

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿ ಈ ತನಕ ದಕ್ಷ ಸೇವೆ ಸಲ್ಲಿಸಿದ ಶ್ರೀ| ಜೆ. ಕೆ. ಅರೋರಾ ಅವರನ್ನು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯ ಡೈರೆಕ್ಟರರನ್ನಾಗಿ ನೇಮಕ ಮಾಡಲಾಗಿದೆಯೆಂದು ತಿಳಿದುಬಂದಿದೆ. ಬೆಂಗಳೂರಿನ ಇಂಡಸ್ಟ್ರೀಸ್ ಎಂಡ್ ಕಾಮರ್ಸ್‌ನ ಎಡಿಶನಲ್ ಡೈರೆಕ್ಟರ್ ಶ್ರೀ| ಎಸ್. ಬಿ. ಮುದ್ದಪ್ಪ ಅವರನ್ನು ದ. ಕ. ಜಿಲ್ಲೆಯ ಜಿಲ್ಲಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

——

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.